

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTIBASAVANTAPPAHOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 35 Wednesday 09-10-2024 E-mail : maruti.b.hosamani76@gmail.com Page: 4 Price : Rs. 1/-


## ಬೆಳ್ಳಂ ಬೆಳಿಗ್ಗೆ ನಗರ ಸಭೆಯ ಅಧಿಕಾರಿಗಳು ಧಿಡೀರ್ ದಾಳಿ: 250 ಕೆ.ಜಿ ಗೂ ಹೆಚ್ಚಿನ ಪ್ಲಾಸ್ಟಿಕ್ ಬ್ಯಾಗ್ ವಶ, ದಂಡ ವಸೂಲಿ

**ಸಿಹಿ ಕಹಿ ಸುದ್ದಿ**

**ಹೊಸಪೇಟೆ** : ಪೌರಾಯುಕ್ತರ ನಿರ್ದೇಶನ ಮೇರೆಗೆ ನಗರದ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಬ್ಯಾಗ್ ಗಳನ್ನ ಅಕ್ರಮವಾಗಿ ಸಂಗ್ರಹಿಸಿ ಇಟ್ಟು ಕೊಂಡು ಮಾರಾಟ ಮಾಡುತ್ತಿದ್ದವರಿಗೆ ಬೆಳ್ಳಂ ಬೆಳಿಗ್ಗೆ ನಗರ ಸಭೆಯ ಅಧಿಕಾರಿಗಳು ದಾಳಿ ನಡೆಸಿ ಬಿಗ್ ಶಾಕ್ ಕೊಟ್ಟರು.

ದಸರಾ ಹಬ್ಬದ ಸಂದರ್ಭದಲ್ಲಿ ಅಂಗಡಿ ಮುಂಗಟ್ಟುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ಲಾಸ್ಟಿಕ್ ಮಾರಾಟ ಮಾಡುತ್ತಿದ್ದಾರೆ ಎಂದು ನಗರಸಭೆ ಪೌರಾಯುಕ್ತರಿಗೆ ಖಚಿತ ಮಾಹಿತಿ ಬಂದ ಹಿನ್ನೆಲೆಯಲ್ಲಿ . ಕೂಡಲೇ ಕಾರ್ಯ ಪ್ರವೃತ್ತರಾದ ಹೊಸಪೇಟೆ ನಗರಸಭೆ ಪರಿಸರ ಅಧಿಕಾರಿ ಆರತಿ ಮತ್ತು ಅವರ ತಂಡ ಹಲವಾರು ಹೂವಿನ ಅಂಗಡಿಗಳ ಮೇಲೆ ದಾಳಿ, ಕಿರಾಣಿ ಶಾಪ್ ಗಳಲ್ಲಿ ಅಕ್ರಮವಾಗಿ ಸಂಗ್ರಹಿಸಿ ಇಟ್ಟು-ಕೊಂಡು ಮಾರಾಟ ಮಾಡುತ್ತಿದ್ದ ಪ್ಲಾಸ್ಟಿಕ್ ಚೀಲಗಳನ್ನ ವಶಕ್ಕೆ ಪಡೆದು ಕೊಂಡರು.

ಅದೇ ರೀತಿ ಮೂರು ಅಂಗಡಿ ಸರ್ಕಲ್ ಏರಿಯಾದ ಪೂಜಾ ಟ್ರೇಡರ್ಸ್ ನಲ್ಲಿ ಅಂಗಡಿಯಲ್ಲಿ ನೂರಾರು ಕೆಜಿ ನಿಷೇಧಿತ ಪ್ಲಾಸ್ಟಿಕ್ ಚೀಲಗಳನ್ನ ಸಂಗ್ರಹಿಸಿ ಇಡಲಾಗಿತ್ತು.

ಖಚಿತ ಮಾಹಿತಿ ಮೇರೆಗೆ ಪೂಜಾ ಟ್ರೇಡರ್ಸ್ ಅಂಗಡಿ ಮೇಲೆ ದಾಳಿ ನಡೆಸಿದ ವೇಳೆ ನೂರಾರು ಕೆಜಿ ಪ್ಲಾಸ್ಟಿಕ್ ಚೀಲಗಳು ಪತ್ತೆ ಆಗಿವೆ. ಕೂಡಲೇ ಅವುಗಳನ್ನ ವಶಕ್ಕೆ ಪಡೆದು ಅಂಗಡಿಯನ್ನ ಸೀಜ್ ಮಾಡಿದರು. ಇದಕ್ಕೂ ಮೊದಲು ಹತ್ತಾರು ಬಾರಿ ಪೂಜಾ ಟ್ರೇಡರ್ಸ್ ಅಂಗಡಿ ಮಾಲೀಕರಿಗೆ



ಎಚ್ಚರಿಕೆ ನೀಡಿದ್ದರೂ ಲೆಕ್ಕಿಸದೆ ಮಾರಾಟ ಮುಂದುವರೆಸಿದ್ದರು ಹೀಗಾಗಿ ಅಂಗಡಿ ಸೀಜ್ ಮಾಡಲಾಗಿದೆ ಎಂದು ನಗರ ಸಭೆ ಸಿಬ್ಬಂದಿ ಪರಿಸರ ಅಧಿಕಾರಿ ಆರತಿ ತಿಳಿಸಿದರು.

ಹೊಸಪೇಟೆ ಸಾರ್ವಜನಿಕರು ತ್ಯಾಜ್ಯ ಸಂಗ್ರಹಣೆ ಮಾಡುವ ವಾಹನಗಳಲ್ಲಿ ಕಸ ಹಾಕದೇ ಎಲ್ಲೆಂದರಲ್ಲಿ ಬೀಸಾಡುತ್ತಿದ್ದಾರೆ ಅಂತ ನಗರ ಸಭೆಗೆ ದೂರುಗಳು ಬರುತ್ತಿದ್ದವು. ಅದರ ಬಗ್ಗೆ ಎಚ್ಚೆತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರನ್ನ ಖುದ್ದಾಗಿ ಹಿಡಿದು ಸ್ಥಳದಲ್ಲೇ ನೂರು ರೂಪಾಯಿಯಂತೆ ಕೆಲವರಿಗೆ ದಂಡ ವಸೂಲಿ ಮಾಡಲಾಗಿದೆ. ಚಿಕ್ಕಪುಟ್ಟ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಮಾರಾಟಗಾರರಿಗೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರಿಗೆ ಸೇರಿ ಇದುವರೆಗೆ 15,000 ಸಾವಿರ ದಂಡ ವಸೂಲಿ ಮಾಡಲಾಗಿದೆ ಎಂದರು.

ಇದುವರೆಗೂ ಒಟ್ಟು 250 ಕೆ.ಜಿ ಗೂ ಹೆಚ್ಚಿನ ಪ್ಲಾಸ್ಟಿಕ್ ವಸ್ತುಗಳು ವಶ ಪಡಿಸಿಕೊಳ್ಳಲಾಗಿದೆ, 15,000 ಸಾವಿರ ದಂಡ ವಸೂಲಿ ಮಾಡಲಾಗಿದೆ, ನಾಗರಿಕರ ಅರೋಗ್ಯದ ಹಿತ ದೃಷ್ಟಿಯಿಂದ ಇನ್ನೂ ಮುಂದೆ ಈ ದಾಳಿ ನಿರಂತರ ವಾಗಿರುತ್ತದೆ. ಪ್ಲಾಸ್ಟಿಕ್ ನಿಷೇಧಕ್ಕೆ ಮಾಲೀಕರು ಸಹಕರಿಸ ಬೇಕು, ನಗರವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಕೈಜೋಡಿಸ ಬೇಕು - ಚಂದ್ರಪ್ಪ ಪೌರಾಯುಕ್ತರು, ನಗರ ಸಭೆ ಹೊಸಪೇಟೆ.

ಈ ಸಂದರ್ಭದಲ್ಲಿ ನಗರಸಭೆ ಸಿಬ್ಬಂದಿಗಳಾದ ಹಿರೇಮಠ, ದಾದಾಪೀರ್, ಮೇಸ್ತ್ರಿಗಳಾದ ನಾಗೇಂದ್ರ ವರ್ಮಾ, ರಮೇಶ್ ಮತ್ತು ಪೌರಕಾರ್ಮಿಕ ಸಿಬ್ಬಂದಿ ಸೇರಿ ಇತರರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್ .ಹೊಸಪೇಟೆ**

## ಅಭಿವೃದ್ಧಿ ಕಾಣದ ಮೋತಿಕಲ್ ತಾಂಡ ಶಾಸಕರ ವಿರುದ್ಧ - ಗ್ರಾಮಸ್ಥರು ಆಕ್ರೋಶ

**ಸಿಹಿ ಕಹಿ ಸುದ್ದಿ**

**ಮೋತಿಕಲ್** : ಹಗರಿ ಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ನೇಮಿರಾಜ್ ನಾಯಕ್ ರವರು ಅವಕಾಶ ಸಿಕ್ಕ ವೇದಿಕೆಗಳಲ್ಲಿ ತಮ್ಮ ಮಾತನ್ನು ಪ್ರಾರಂಭ ಮಾಡುವುದೇ ಕ್ಷೇತ್ರದ ಅಭಿವೃದ್ಧಿ ಎಂದು ಆದರೆ ಅವರ ತವರು ಕ್ಷೇತ್ರವಾದ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಹ್ಯಾಳ್ಯಾ ಗ್ರಾಮ ಪಂಚಾಯಿತಿಗೆ ವ್ಯಾಪ್ತಿಯ ಮೋತಿಕಲ್ ತಾಂಡದಲ್ಲಿ ಇಂದಿಗೂ ಅಭಿವೃದ್ಧಿ ಕಾಣದೇ ಜನ ಪ್ರತಿನಿಧಿಗಳಿಗೆ ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿ.ಎಚ್. ಎಂ. ಗಂಗಾಧರ ಇವರಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಹಾಗೂ ಈ ಹಿಂದೆ ಇದ್ದ ಬಿಜೆಪಿ ಸರ್ಕಾರ ತಾಂಡಗಳ ಜನರು ಗೂಳೆ ಹೋಗಬಾರದು ಹೀಗೆ ಗೂಳೆ ಹೋಗುವುದರಿಂದ ಅವರ ಕುಟುಂಬಗಳಿಗೆ ನಾನಾ ರೀತಿಯ ತೊಂದರೆ ಆಗಿ ಮಕ್ಕಳ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಮಕ್ಕಳು ಅವಿದ್ಯಾವಂತ ರಾಗುತ್ತಾರೆ ಇದರಿಂದ ದೇಶದ ಸಾಕ್ಷರತೆ ಬೆಳೆವಣಿಗೆ ಕ್ಷೀಣಿಸುತ್ತದೆ ಎಂಬ ಉದ್ದೇಶದಿಂದ ನರೇಗಾ ಯೋಜನೆ ಅಡಿ 100 ದಿನ ಉದ್ಯೋಗ ಕೊಡಬೇಕು ಎಂದಿದ್ದರು. ಗ್ರಾಮ ಪಂಚಾಯಿತಿ ಅಧಿಕಾರಿಗಳು ತಾರತಮ್ಯ ನಡೆಸುತ್ತಾ ನಮಗೆ ಉದ್ಯೋಗ ನೀಡುತ್ತಿಲ್ಲ ನಮಗೆ ವಸತಿ ಉಳಿಯಲು ಈಗಿರುವ ಮನೆಗಳು ಸುರಿಯುತ್ತಿರುವ ಭಾರಿ ಮಳೆ ಗಾಳಿಗೆ ಯಾವಾಗ ಮೇಲ್ಚಾವಣೆ ಕುಸಿದು ಮರಣ ಹೊಂದುತ್ತೇವೆ ಎಂಬ ಭಯ ನಮ್ಮನ್ನು



ನಿತ್ಯವೂ ಬಿಡದೇ ಕಾಡುತ್ತದೆ. ಈ ತಾರತಮ್ಯ ನೀತಿಯಿಂದ ಬೇಸತ್ತು ನಾವು ಮಂಗಳೂರಿಗೆ ಕೆಲಸಕ್ಕೆ ಹೋಗುತ್ತೇವೆ. ನಮ್ಮ ಗ್ರಾಮಕ್ಕೆ ಒಂದು ಮನೆ ಸಹ ಮಂಜೂರು ಮಾಡಿಲ್ಲ ಇತ್ತ ನರೇಗಾ ಕೂಲಿ ಕೆಲಸವೂ ಇಲ್ಲ. ಸೌಲಭ್ಯಗಳನ್ನು ವಂಚನೆಗೆ ಸಾಕ್ಷಿಯಾಗಿದೆ.

ಇನ್ನೂ ತೊಂದರೆ ಕೊಡುವುದಕ್ಕಾಗಿಯೇ ಈ ಗ್ರಾಮದಲ್ಲಿ ಜೆಜೆಎಂ ಕಾಮಗಾರಿ ಬಂದಿದೆಯೋ ಎನ್ನುವಂತೆ ಊರು ತುಂಬಾ ರಸ್ತೆಗಳನ್ನು ಗುಂಡಿಗಳಾಗಿ ಮಾಡಿ ಸುಮಾರು ಆರು ತಿಂಗಳಾದರೂ ಸಿ.ಸಿ ರಸ್ತೆ ರಿಪೇರಿ



ಮಾಡಿಸುವ ಕೆಲಸಕ್ಕೆ ಮುಂದಾಗಿಲ್ಲ, ಇಲ್ಲಿನ ಅಧಿಕಾರಿಗಳು ಮತ್ತು ಜನನಾಯಕರು ಎಷ್ಟು ಲಂಚ ಪಡೆದವರು ಗೊತ್ತಿಲ್ಲ , ಸೌಲಭ್ಯಗಳಿಂದ ವಂಚನೆ ಒಳಗಾದ ಗ್ರಾಮ ನಮ್ಮದಾಗಿದೆ. ಎಂದು ಗಂಗಮ್ಮ ರಾಜು ನಾಯಕ್ ಕೃಷ್ಣ ನಾಯಕ್ ಲಕ್ಷ್ಮೀಬಾಯಿ ಮತ್ತಿತರರು ಮಾಧ್ಯಮ ಪ್ರತಿ ನಿಧಿಗಳಿಗೆ ತಿಳಿಸಿದರು.

ನಾವುಗಳು ಅಭಿವೃದ್ಧಿ ಮಾಡುವರು, ಎಂಬ ಮಹಾ ದಾಸೆಯಿಂದ ಕೆ.ನೇಮಿರಾಜ್ ನಾಯ್ಕ್ ಇವರನ್ನು ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕರನ್ನಾಗಿ ಆಯ್ಕೆ ಮಾಡಿದ್ದು ತಪ್ಪಾಗಿದೆ ಎಂಬ ಭಾವನೆ ನಮ್ಮ ಗ್ರಾಮದ ಜನರು ಮಾತನಾಡಿ ಕೊಳ್ಳುತ್ತಿದ್ದಾರೆ. ಮಾನ್ಯ ಶಾಸಕರು ನಮ್ಮ ಗ್ರಾಮದ ಕಡೆಗೆ ಗಮನಹರಿಸಿ ಜನರ ಭಾವನೆಯಲ್ಲಿರುವ ತಪ್ಪು ಅಭಿಪ್ರಾಯ ಸುಳ್ಳು ಮಾಡಬೇಕು ಎಂದು ಗ್ರಾಮದ ಸಾರ್ವಜನಿಕರು ಮನವಿ ಮಾಡಿದರು. ನಮ್ಮ ಗ್ರಾಮಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ನರೇಗಾ ಕೆಲಸ ಬೇಕಾಗಿರುವ ಸೌಲತ್ತುಗಳನ್ನು ನೀಡಬೇಕೆಂದು ಕೇಳುವುದರ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ. ಕೊಟ್ಟೂರು**

## ಕಾಂಗ್ರೆಸ್‌ನಿಂದ ಗಾಂಧಿ ನಡಿಗೆ: ಉಮಾಶ್ರೀ

**ಬನಹಟ್ಟಿ** : ರಾಷ್ಟ್ರಪಿತ ಮಹಾತ್ಮಾ ಗಾಂಧಿ ಜನ್ಮ ದಿನದಂದು ರಾಜ್ಯ ಸರ್ಕಾರ ಮತ್ತು ಕಾಂಗ್ರೆಸ್ ಭಿನ್ನವಾಗಿ ಆಚರಣೆ ಮಾಡಿತು. ಮಹಾತ್ಮಾ ಗಾಂಧಿ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದಿದ್ದ ಎಐಸಿಸಿ ಅಧಿವೇಶನಕ್ಕೆ ನೂರು ವರ್ಷ ಸಂದ ಹಿನ್ನೆಲೆಯಲ್ಲಿ ಗಾಂಧಿ ಜಯಂತಿಯನ್ನು ಕಾಂಗ್ರೆಸ್ ಪ್ರತ್ಯೇಕ ಬೃಹತ್ ಪಾದಯಾತ್ರೆ ನಡೆಸುವ ಮೂಲಕ ಆಚರಣೆ ಮಾಡಿತು.

ಗಾಂಧಿ ಜಯಂತಿ ಹಿನ್ನೆಲೆಯಲ್ಲಿ ಮಾಜಿ ಸಚಿವೆ, ವಿಧಾನಪರಿಷತ್ ಸದಸ್ಯೆ ಶ್ರೀಮತಿ ಉಮಾಶ್ರೀ ಹಾಗು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ನೇತೃತ್ವದಲ್ಲಿ ನಗರದ ಗಾಂಧಿ ಪ್ರತಿಮೆಗೆ ಹಾರ ಹಾಕುವ ಮೂಲಕ ಕಾಂಗ್ರೆಸ್ ಪಕ್ಷದ ಕಚೇರಿವರೆಗೆ ಗಾಂಧಿ ನಡಿಗೆ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯೆ ಉಮಾಶ್ರೀ ಮಾತನಾಡಿ, ಇದೊಂದು ಐತಿಹಾಸಿಕ ದಿನವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ನಾಯಕತ್ವ ವಹಿಸಿದವರು ಮಹಾತ್ಮಾ ಗಾಂಧಿ. ಬೆಳಗಾವಿಯಲ್ಲಿ ಎಐಸಿಸಿ ಅಧಿವೇಶನಕ್ಕೆ ಗಾಂಧಿ ಅಧ್ಯಕ್ಷತೆ ವಹಿಸಿದ್ದರು. ಈ ಅಧಿವೇಶನಕ್ಕೆ ನೂರು ವರ್ಷವಾಗಿದೆ. ಈ ಹಿನ್ನೆಲೆಯಲ್ಲಿ




ಮಹಾತ್ಮಾ ಗಾಂಧಿಯವರ ತತ್ವಾದರ್ಶ ಹಾಗು ಆಚಾರ-ವಿಚಾರಗಳನ್ನು ಯುವ ಜನರು ಮೈಗೂಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಕಾಂಗ್ರೆಸ್ಗೆ ದೊಡ್ಡ ಇತಿಹಾಸವಿದೆ. ಗಾಂಧೀಜಿ ನಾಯಕತ್ವದಡಿ ಶತಮಾನೋತ್ಸವ ಸಂಭ್ರಮ ಆಚರಿಸುವುದು ನಿಜಕ್ಕೂ ಶ್ಲಾಘನೀಯವೆಂದರು.

ಮಲ್ಲಪ್ಪ ಸಿಂಗಾಡಿ, ಲಕ್ಷ್ಮಣ ದೇಸಾರಟ್ಟಿ, ರಾಜು ಭದ್ರನ್ನವರ, ಬಸವರಾಜ ಕೊಕಟನೂರ, ಭರಮು ಉಳ್ಳಾಗಡ್ಡಿ, ಸುರೇಶ ಪಾಟೀಲ, ಶೇಖರ ಹಕ್ಕಲದಡ್ಡಿ, ನೀಲೇಶ ದೇಸಾಯಿ, ಇರ್ಷಾದ್ ಮೋಮಿನ, ಮುಜಫರ್ ಮುಲ್ಲಾ, ವೆಂಕನಗೌಡ ಪಾಟೀಲ, ಹಾರೂನ್ ಬೇವೂರ, ರಾಹುಲ್ ಕಲಾಲ, ಸಂಗಮೇಶ ಮಡಿವಾಳರ,

ಶಂಕರ ಕೆಸರಗೊಪ್ಪ, ಫಜಲ್ ಅತ್ರೂಟ, ರೇಣುಕಾ ಮಡ್ಡಿಮನಿ, ಕಿರಣ ಕರಲಟ್ಟಿ, ನಾರಾಯಣ ನಿಕ್ಕಮ್, ಅನೀಲ ಬೀಳಗಿ, ಪಿಂಟು ಕುಂಬಾರ, ರಾಜೇಶ ನಾಗರಾಜ, ಮಲ್ಲಪ್ಪ ಹಿಪ್ಪರಗಿ, ಅಶೋಕ ರೆಡ್ಡಿ, ಗಜಾನನ ಕರಿಗಾರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಎಂ. ವ್ಹಿ. ಪಟ್ಟಣ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ರಾಜ್ಯ ಮಟ್ಟಕ್ಕೆ ಆಯ್ಕೆ



**ರಬಕವಿ** : 2024-25 ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ಬಾಗಲಕೋಟ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ರಬಕವಿಯ ಎಂ. ವ್ಹಿ. ಪಟ್ಟಣ ಪದವಿ ಪೂರ್ವ ಕಾಲೇಜಿನ ಒಟ್ಟು ಹದಿನಾರು ಜನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆಯುವುದರೊಂದಿಗೆ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ವಿಭಾಗದ ಟೆನ್ನಿಕ್ವಾಯಿಟ್, ಪ್ರಥಮ ಸ್ಥಾನ, ಟೆನ್ನಿಸ ವ್ಹಾಲಿಬಾಲ್ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಬಾಲಕಿಯರ ವಿಭಾಗದಲ್ಲಿ ಟೆನ್ನಿಸ ವ್ಹಾಲಿಬಾಲ್, ಟೆನ್ನಿಕ್ವಾಯಿಟ್, ದ್ವಿತೀಯ ಸ್ಥಾನ, ಆಕ್ರೋಬೆಟಿಕ್ ಜಿಮ್ನಾಸ್ಟಿಕನಲ್ಲಿ ಮತ್ತು ರಿದಮಿಕ್ ಜಿಮ್ನಾಸ್ಟಿಕ್ನಲ್ಲಿ ಪ್ರಥಮ ಸ್ಥಾನ ಮತ್ತು ಜಂಪ್ ರೋಪ್ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದು ಚಾಮರಾಜನಗರ, ಯಾದಗಿರಿ,ಕೊಪ್ಪಳ,ಧಾರವಾಡದಲ್ಲಿನಡೆಯಲಿರುವ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಬಾಗಲಕೋಟ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ.

ಕ್ರೀಡಾಕೂಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಾದ ಪೃಥ್ವೀರಾಜ ಕಳ್ಳಿಗುದ್ದಿ, ರಿಹಾನ ಗೋಕಾಕ, ಕಿರಣ ಅಥಣಿ, ಅಕ್ಷಯ ಕೊಣ್ಣೂರ, ಅರ್ಪಿತಾ ಹರಿಜನ, ನಂದಿನಿ ಸಿಕ್ಕಲಗಾರ, ಸುಕನ್ಯಾ ಹುಣಶ್ಯಾಳ, ಅಭಿನಯ ಹುಣಶ್ಯಾಳ, ಸೃಷ್ಠಿ ಗೌಳಿ, ಅಶ್ವಿನಿ ತುರಾದಿ, ಲಕ್ಷ್ಮಿ ಲೋಕಾಪೂರ, ರಿತು ಹರಿಜನ, ಐಶ್ವರ್ಯಾ ಚಿಮ್ಮಡ, ವಿಜಯಲಕ್ಷ್ಮಿ ಯಾದವಾಡ, ರತ್ನಾ ಔರಸಂಗ, ಐಶ್ವರ್ಯಾ ಯಲ್ಲಟ್ಟಿ ಇವರ ಸಾಧನೆಗೆ ಸಂಸ್ಥೆಯ ಚೇರಮನ್ ಬಸವರಾಜ ಎಂ. ಯಂಡಿಗೇರಿ , ಆಡಳಿತ ಮಂಡಳಿಯ ಸದಸ್ಯರು ಹಾಗೂ ಪ್ರಾಚಾರ್ಯ ಬಿ.ಎಸ್.ಕಾಂಬಳೆ, ದೈಹಿಕ ಶಿಕ್ಷಣ ಉಪನ್ಯಾಸಕರಾದ ಎಂ. ಕೆ. ಮುರಗೋಡ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

## ಮತ್ತೊಂದು ಮೈಲುಗಲ್ಲಿಗೆ ಸಾಕ್ಷಿಯಾಗಲಿರುವ 'ಹಜಾರೆ ಬಜಾರ್'

**ರಬಕವಿ** : ಈಗಾಗಲೇ ಉತ್ತರ ಕರ್ನಾಟಕದಲ್ಲಿ ಇತಿಹಾಸ ನಿರ್ಮಿಸಿರುವ ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ರಬಕವಿಯ 'ಹಜಾರೆ ಟೆಕ್ಸಟೈಲ್ಸ್'ನೊಂದಿಗೆ ಮತ್ತೊಂದು ಮೈಲುಗಲ್ಲು ಸ್ಥಾಪಿಸುವಲ್ಲಿ ಬರುವ ಅಕ್ಟೋಬರ್ ಏಳರಂದು ಸಾಕ್ಷಿಯಾಗಲಿದ್ದು, ಒಂದೇ ಸೂರಿನಡಿ ಗೃಹ ಬಳಕೆಯ ಎಲ್ಲಾ ವಸ್ತುಗಳು ಅಗ್ಗದರದಲ್ಲಿ ಅಂದರೆ ಉತ್ಪಾದನೆ ಮಾಡುವ ಕಾರ್ಖಾನೆಯಿಂದ ನೇರ ಗ್ರಾಹಕರ ಕೈ ಸೇರುವ ರೀತಿಯಲ್ಲಿ ದೊರಕುವಲ್ಲಿ ಕಾರಣವಾಗಲಿದೆ.

ಈ ಕುರಿತು ಬುಧವಾರ ಸಂಜೆ ರಬಕವಿಯ 'ಹಜಾರೆ ಬಜಾರ್ ' ಆವರಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ 'ಹಜಾರೆ ಬಜಾರ್ ನ ಒಡೆಯ ಸತೀಶ ಹಜಾರೆ ಮಾತನಾಡಿ, ಕಟ್ಟಕಡೆಯ ಜನರನ್ನು ಗುರಿಯಾಗಿಸಿಕೊಂಡು ಎರಡು ಲಕ್ಷ ಚದರ ಅಡಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಸಾಮಾನ್ಯ ಧಾನ್ಯಗಳಿಂದ ಹಿಡಿದು ಬಂಗಾರದ ಆಭರಣಗಳವರೆಗೆ ನೂರಾರು ವಿಭಿನ್ನ ರೀತಿಯ ಮನೆ ಬಳಕೆಗೆ ಅವಶ್ಯವಿರುವ ವಸ್ತುಗಳನ್ನು ಅತ್ಯಂತ ಕಡಿಮೆ ದರದಲ್ಲಿ




ನಮ್ಮ ಭಾಗದ ಜನತೆಗೆ ದೊರೆಯುವಂತೆ ಒಂದೇ ಸೂರಿನಲ್ಲಿ ಸಾಮಾನ್ಯ ಜನರ ಕೈಗೆಟುಕಲೆಂಬ ಉದ್ದೇಶದಿಂದ ಈ ಬಜಾರ ನಿರ್ಮಾಣ ಮಾಡಲಾಗಿದೆ ಎಂದರು.

ಇದರಿಂದ ವ್ಯಾಪಾರದ ಜೊತೆಗೆ ಈ ಭಾಗದ ನೂರಾರು ಕುಟುಂಬಗಳಿಗೆ ಉದ್ಯೋಗ ಒದಗಿಸುವಲ್ಲಿ ಕಾರಣವಾಗಲಿದೆ ಎಂದರು.

ಮಹಾನಗರ ಪಾಲಿಕೆಗಳಲ್ಲಿನ ವಸ್ತು ಭಂಡಾರಕ್ಕಿಂತಲೂ ವಿಭಿನ್ನವಾಗಿ ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳಲ್ಲಿಯೇ ಅತಿ ದೊಡ್ಡ ಬಜಾರ ಆಗಿ ಹೊರ ಹೊಮ್ಮುತ್ತಿದ್ದು, ಎಲ್ಲ ತರಹದ ವಸ್ತುಗಳು ಹೋಲ್ಸೇಲ್ ದರದಲ್ಲಿ ಸಿಗಲಿವೆ ಎಂದು ಸತೀಶ ಹಜಾರೆ ತಿಳಿಸಿದರು.

ಬರುವ ಅಕ್ಟೋಬರ ಏಳರಂದು ಬೆಳಿಗ್ಗೆ 9 ಗಂಟೆಗೆ ರಬಕವಿಯ ಹೊಸ ಬಸ್ ನಿಲ್ದಾಣ ಹತ್ತಿರ ಭವ್ಯ ಪ್ರಾರಂಭೋತ್ಸವ ಜರುಗಲಿದೆ.

ದಿವ್ಯ ಸಾನಿಧ್ಯವನ್ನು ಮುಗಳಖೋಡ-ಜಿಡಗಾ ಮಠದ ಶಿವಯೋಗಿ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳು ಹಾಗು ರಬಕವಿ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ವಹಿಸಲಿದ್ದಾರೆ.

ಬಜಾರನ ಉದ್ಘಾಟನೆಯನ್ನು ಹೆಸರಾಂತ ಜವಳಿ ವ್ಯಾಪಾರಸ್ಥ ಚಡಚಣದ ಬಾಹುಬಲಿ ಎನ್. ಮುತ್ತಿನ ಸಹೋದರರಿಂದ ಜರುಗಲಿದೆ.

ಜ್ಯೋತಿ ಬೆಳಗಿಸುವ ಕಾರ್ಯಕ್ರಮದಲ್ಲಿ ಹಜಾರೆ ಪರಿವಾರದ ಶ್ರೀಮತಿ ಪದ್ಮಾವತಿ, ಗಣಪತರಾವ್, ವಸಂತರಾವ್, ಉದಯ ಪಾಲ್ಗೊಳ್ಳಲಿದ್ದಾರೆಂದು ಪ್ರಸನ್ನ ಹಜಾರೆ ತಿಳಿಸಿದರು.

ಈ ಸಂದರ್ಭದಲ್ಲಿ ರಬಕವಿ ಬನಹಟ್ಟಿ ನಗರಸಭೆಯ ಅಧ್ಯಕ್ಷೆ ವಿದ್ಯಾ ದಬಾಡಿ, ಡಾ. ಎಂ. ಎಸ್. ದಾನಿಗೊಂಡ, ಮಲ್ಲಿಕಾರ್ಜುನ ನಾಶಿ, ಗಣಪತರಾವ್ ಹಜಾರೆ, ಪ್ರಕಾಶ ದೇಸಾಯಿ, ರಾಜಶೇಖರ ಮಾಲಾಪುರ, ಸಿದ್ಧರಾಜ ಪೂಜಾರಿ, ಅಶೋಕ ಅಂಗಡಿ, ಶ್ರೀಶೈಲ ದಭಾಡಿ, ಶ್ರೀಶೈಲ ದಲಾಲ, ರಾಮಣ್ಣ ಹುಲಕುಂದ ಮಲ್ಲಿಕಾರ್ಜುನ ಸಾಬೋಜಿ, ಓಂಪ್ರಕಾಶ ಕಾಬರಾ, ಸಿದ್ರಾಮಪ್ಪ ಸವದತ್ತಿ, ಮಹಾದೇವ ಧೂಪದಾಳ, ಮಹಾದೇವ ಕೋಟ್ಯಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



**ಬನಹಟ್ಟಿ : ಇಲ್ಲಿಯ ಈಶ್ವರಲಿಂಗ ಮೈದಾನದಲ್ಲಿ ದಸರಾ ಮಹೋತ್ಸವದ ಅಂಗವಾಗಿ ದೇವಿ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಪೂಜೆ ಸಲ್ಲಿಸಿದರು. ಬಸವರಾಜ ಜಾಡಗೌಡ, ದಾನಪ್ಪ ಹುಲಜತ್ತಿ, ರವಿ ಕರಲಟ್ಟಿ, ಸೋರಗಾಂವಿ, ರಾಜು ಪಿಟಗಿ, ಅರುಣ ಮಾಲಾಪುರ, ಕುಮಾರ ಮಂಡಿ, ಕಾಡು ಕಾಂತಿಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.**

# ಕವಿತಾಳ: ಸ್ಥಾಪಿತ ಧರ್ಮಾಧಿಕಾರದ ವಿರುದ್ಧ ಸೆಣೆಸಾಡಿದ ಶರೀಫ ಇಡೀ ಸಮಾಜಕ್ಕೆ ಸದ್ಗುರುವಾಗಲ: ಆರ್.ಮಾನಸಯ್ಯ

**ಕವಿತಾಳ :** ಮಸ್ಕಿ ತಾಲೂಕಿನ ಪಾಮನಕಲ್ಲೂರು ಗ್ರಾಮದಲ್ಲಿ ಕ್ರಾಂತಿಕಾರಿ ಸಾಂಸ್ಕೃತಿಕ ವೇದಿಕೆ ಆರ್ ಸಿಎಫ್ ಕರ್ನಾಟಕ ರಾಜ್ಯ ಸಮಿತಿಯು, ಕಲಾತಂಡ ಕಲಾಮಂಡಳಿ, ರೂಪಕ ಹಾಗೂ ಬೀದಿ ನಾಟಕ ಮಾಧ್ಯಮಗಳಮೂಲಕನಾಡಿನ ದುಡಿಯುವಹಾಗೂ ದಮನಿತ ಜನರ ಸಾಂಸ್ಕೃತಿಕ ಸಂಘಟನೆಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಇದೀಗ ತನ್ನ ಚಟುವಟಿಕೆಯನ್ನು ರಂಗಭೂಮಿಗೆ ವಿಸ್ತರಿಸಲು ಮುಂದಾಗಿದೆ. ಇದರ ಮೊದಲ ರಂಗ ಹೆಜ್ಜೆಯಾಗಿ ನಾಡಿನ ಪ್ರತಿಭಾವಂತ, ಪ್ರಗತಿಪರ ನಾಟಕಕಾರ ಶ್ರೀ ರಂಜಾನ್‌ಸಾಬ್‌ಉಳ್ಳಾಗಡ್ಡಿರಚಿಸಿನಿರ್ದೇಶಿಸುತ್ತಿರುವ 'ಸದ್ಗುರು ಶರೀಫ' ಎಂಬ ಹೊಸ ನಾಟಕವನ್ನು ರಂಗ ಸಜ್ಜಿಕೆ ಏರಿಸಲು ಆರ್ ಸಿ ಎಫ್ ತಯಾರಾಗಿದೆ. ಇಂದು ಪಾಮನಕಲ್ಲೂರಶ್ರೀವಾಲ್ಮೀಕಿಭವನದಲ್ಲಿ ಈನಾಟಕದ ತಾಲೀಮ್ ಆರಂಭವಾಯಿತು. ತಾಲೀಮ್ ಉದ್ಘಾಟಿಸಿ ಮಾತನಾಡಿದ, ಕಾರ್ಮಿಕ ಮುಖಂಡ , ಕವಿ ಹಾಗೂ ಶ್ರೀ ಕೊಡೇಕಲ್ಲ ಬಸವಣ್ಣ ಶಾಖಾ ಮಠ ಅಮರಜ್ಞಾನ ಪೀಠದ ಅಧ್ಯಕ್ಷ ಆರ್ ಮಾನಸಯ್ಯ " ಗೋವಿಂದ ಭಟ್ಟ ಹಾಗೂ ಶರೀಫ ಗುರು ಪುತ್ರ ಪರಂಪರೆಯು ಭಾರತ ದೇಶದ ನಿಜಾತ್ಮ ಶಕ್ತಿಗಳಾಗಿವೆ. ಶೋಷಣೆ, ತಾರತಮ್ಯ, ಅಸಮಾನತೆ ಹಾಗೂ ಕ್ರೌರ್ಯವನ್ನು ದೇವರ ಹೆಸರಲ್ಲಿ ಉಳಿಸಿ ಬೆಳೆಸುತ್ತಾ ಬಂದ ಸ್ಥಾಪಿತ ಧರ್ಮಾಧಿಕಾರಕ್ಕೆ ಈ ಪರಂಪರೆಯು ದೊಡ್ಡ ಸವಾಲಾಕಿದೆ. ಸಾವಿರಾರು ವರ್ಷಗಳ ಸಾಂಸ್ಕೃತಿಕ ಸಂಘರ್ಷದ ಮುಂದುವರಿಕೆಯಾಗಿ ಕಲ್ಯಾಣದ ಶರಣ ಚಳುವಳಿ ಹಾಗೂ 18 ಹಾಗೂ 19ನೇ ಶತಮಾನಗಳ ತತ್ವಪದಕಾರರ ಚಳುವಳಿ ; ಈ ಪೈಕಿ ಶಿಶುನಾಳ ಶರೀಫರು ಅಜಾತ ನಾಗಲಿಂಗರು, ಹೇರೂರು ವಿರುಪಾವಧೂತರು, ಗರಗದ ಮಡಿವಾಳಪ್ಪನವರು ಅಗ್ರ ಪಂಕ್ತಿಯ ತತ್ವಜ್ಞಾನಿಗಳಾಗಿದ್ದಾರೆ. ಇವರನ್ನು ನಮ್ಮ ಸಮಾಜ ಸದ್ಗುರುಗಳನ್ನಾಗಿ ಸ್ವೀಕರಿಸಬೇಕಾದ ಸನ್ನಿವೇಶ ಇದಾಗಿದೆ. ಸ್ಥಾಪಿತ ಧರ್ಮಾಧಿಕಾರದ ವಿರುದ್ಧ ಸೆಣೆಸಾಡಿದ ಶರೀಫರ ಸಂದೇಶ ಈ ನಾಟಕದ ಮೂಲಕ ಕನ್ನಡದ ನೆಲದುದ್ದಕ್ಕೂ ಪಸರಿಸಲಿ ಜೇಂಕರಿಸಲಿ " ಎಂದು ಕರೆ ನೀಡಿದರು.

ನಾಡಿನಜನಕವಿಶ್ರೀದಾನಪ್ಪನೀಲೋಗಲ್‌ಮಾತನಾಡಿ, "ಧರ್ಮದ ದಬ್ಬಾಳಿಕೆಯ ಈ ದುರ್ದಿನಗಳಲ್ಲಿ ಸದ್ಗುರು ಶರೀಫ ನಾಟಕವು ಮುಟ್ಟು ಮೈಲಿಗೆ ಜಾತಿ ಪಂಥ ಅಸಮಾನತೆ ವಿರುದ್ಧ ಹೋರಾಟ ನಿರತ ಜನತೆಗೆ ಸಾಂಸ್ಕೃತಿಕ ಶಕ್ತಿಯಾಗಲಿ " ಎಂದು ಹಾರೈದರು.

ಆರ್‌ಸಿಎಫ್ ಕಲಾವಿದರು, ಅಮರ ಜ್ಞಾನಪೀಠದ ಶರಣ ಸೈನಿಕರಾದ ಶ್ರೀ ತಿಪ್ಪಣ್ಣ ಚಿಕ್ಕ ಹೆಸರೂರ, ಶ್ರೀ ನಾಗಪ್ಪ ತಳವಾರ್ ಹಾಗೂ ನಾಟಕಕಾರ ರಂಜಾನ್ ಸಾಬ್ ಉಳ್ಳಾಗಡ್ಡಿ ಅವರು , ಆರ್ ಸಿ ಎಫ್ ಮುಖಂಡ ಆದೇಶ ನಗನೂರ್, ಯುವ ಪ್ರತಿಭೆ ಎಂ. ನಿಸರ್ಗ, ಮುದಿಯಪ್ಪ,ತಿಮ್ಮಣ್ಣ ಸೇರಿದಂತೆ ಮುಂತಾದವರು ನಾಟಕ ತಾಲಿಮ್ ಶುಭಾರಂಭ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಮಾಜವನ್ನು ಒಗ್ಗೂಡಿಸುವುದು ಮಠಾಧೀಶರ ಕರ್ತವ್ಯ



**ಜಮಖಂಡಿ :** ಸಮಾಜವನ್ನು ಒಗ್ಗೂಡಿಸುವುದು ಬೆಳಸುವದು ಮಠಾಧೀಶರ, ಶ್ರೀಗಳ ಕರ್ತವ್ಯವಾಗಿದೆ. ಸನಾತನ ಧರ್ಮ, ಸಂಸ್ಕೃತಿಯನ್ನು ಉಳಿಸಿ, ಯುವಪೀಳಿಗೆಯನ್ನು ಧರ್ಮಮಾರ್ಗದಲ್ಲಿ ನಡೆಸಲು ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳುವದು ಅವಶ್ಯವಾಗಿದೆ ಎಂದು ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದರು.

ನಗರದ ಮುತ್ತಿನಕಂತಿ ಹಿರೇಮಠದಲ್ಲಿ ನವರಾತ್ರಿ ಉತ್ಸವ ಆಚರಣೆ ನಿಮಿತ್ತ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಚಾರ ಸಾಮಗ್ರಿ ಬಿಡುಗಡೆಗೊಳಿಸಿ ಮಾತನಾಡಿದ ಶ್ರೀಗಳು, ಧರ್ಮದ ರಕ್ಷಣೆಗೆ ಸನಾತನ ಸಂಸ್ಕೃತಿ ಆಚರಣೆಗಳು, ಸಭೆ ಸಮಾರಂಭಗಳು ಅವಶ್ಯಕ. ಅ.3 ರಿಂದ ಅ.13ರ ವರೆಗೆ ಶ್ರೀದೇವಿ ನವರಾತ್ರಿ ಉತ್ಸವ ಜರುಗಲಿದ್ದು, ಪುರಾಣ, ಪ್ರವಚನ, ವಿಶೇಷಪೂಜೆಗಳು, ರುದ್ರಾಭಿಷೇಕ ಹೋಮ, ಕುಂಕುಮಾರ್ಚನೆ ಹತ್ತಾರು ಕಾರ್ಯಕ್ರಮಗಳು ಸತತವಾಗಿ 10 ದಿನಗಳವರೆಗೆ ನಡೆಯಲಿವೆ ಎಂದರು. ಅ.13 ರಂದು ಶ್ರೀಶೈಲ ಪೀಠದ ಜಗದ್ಗುರು ಡಾ.ಚೆನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯರು ಅವರಿಂದ ಅಯ್ಯಾಚಾರ ಲಿಂಗದೀಕ್ಷೆಯೊಂದಿಗೆ ಉಡಿತುಂಬುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರತಿಯೊಂದು ಸಮಾಜದ ಹಿರಿಯರು, ಸಾರ್ವಜನಿಕರ ಸಹಕಾರದೊಂದಿಗೆ ಕಾರ್ಯಕ್ರಮ ನಡೆಯಲಿದೆ. ಅನಾಥ ಮಕ್ಕಳಿಗೆ ಬಟ್ಟೆ, ಪುಸ್ತಕಗಳ ವಿತರಣೆ, ವೃದ್ಧಾಶ್ರಮದ ಹಿರಿಯರಿಗೆ ಬಟ್ಟೆಗಳ ವಿತರಣೆ ನಡೆಯಲಿದೆ. ಸತತ 10 ದಿನಗಳ ವರೆಗೆ ನಡೆಯಲಿರುವ ನಾಡಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ನ್ಯಾಯವಾದಿ ಎನ್.ಎಸ್.ದೇವರವರ ಮಾತನಾಡಿ, 15 ವರ್ಷಗಳಿಂದ ನವರಾತ್ರಿ ಉತ್ಸವ ನಡೆಯುತ್ತಿದ್ದು, ಶ್ರೀಮಠ ಸಮಾಜಲ್ಲಿ ಜಾಗೃತಿ ಮತ್ತು ಯುವಕರನ್ನು ಧಾರ್ಮಿಕ, ಸಾಮಾಜಿಕ ಕಾರ್ಯದಲ್ಲಿ ತೊಡಗಿದೆ. ವ್ಯಸನಮುಕ್ತ ಸಮಾಜ ನಿರ್ಮಿಸಲು ದೀಕ್ಷೆ ಮಾಡಿದ್ದು ಇದರಿಂದ ಸಮಾಜದಲ್ಲಿ ಬದಲಾವಣೆ ಕಾಣುತ್ತಿದೆ ಎಂದರು.

ಕಸಾಪ ತಾಲೂಕಾಧ್ಯಕ್ಷ ಸಂತೋಷ ತಳಕೇರಿ ಮಾತನಾಡಿ, ಸಮಾಜವನ್ನು ಉತ್ತಮವಾಗಿ ಕಟ್ಟುವ ಕೆಲಸವನ್ನು ಮುತ್ತಿನಕಂತಿಮಠದ ಶ್ರೀಗಳು ಮಾಡುತ್ತಿದ್ದಾರೆ, ಜಾತಿಗಳ ಗೊಂದಲ ದೂರವಿಟ್ಟು ಎಲ್ಲ ಸಮಾಜದವರನ್ನು ಒಂದು ಗೂಡಿಸಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಶ್ಲಾಘನೀಯ. 10 ದಿನಗಳ ನವರಾತ್ರಿ ಉತ್ಸವದಲ್ಲಿ ನಗರದ 8 ಮಹಿಳಾ ಮಂಡಳಗಳು ಭಾಗವಹಿಸಲಿವೆ ವಿವಿಧ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಎಲ್ಲ ಸಮಾಜದ ಹಿರಿಯರು ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸುವುದು ವಿಶೇಷವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರುದ್ರಯ್ಯ ಕರಡಿ, ಸಂತೋಷ ಚನಾಳ ವಿನೋದ ಲೋಣಿ, ಮಲ್ಲಿಕಾರ್ಜುನ ಚೆನ್ನವೀರ ಸಹಿತ ಹಲವರು ಇದ್ದರು.

# ಗಾಂಧಿ ಜಯಂತಿ ಪ್ರಯುಕ್ತ ಸ್ವಚ್ಛತಾ ಕಾರ್ಯಕ್ರಮ



**ಚಿಮ್ಮಡ :** ಇಲ್ಲಿನ ಗ್ರಾಮ ಪಂಚಾಯತಿ ಆಶ್ರಯದಲ್ಲಿ ಮಹಾತ್ಮಾ ಗಾಂಧಿ ಜಯಂತಿ ಹಾಗೂ ಲಾಲ್ ಬಹಾದ್ದೂರ ಶಾಸ್ತ್ರಿ ಜಯಂತಿ ಪ್ರಯುಕ್ತ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಹಾತ್ಮಾ ಗಾಂಧಿಜಿ ಹಾಗೂ ಲಾಲ್ ಬಹಾದ್ದೂರ ಶಾಸ್ತ್ರಿಯವರ ಭಾವ ಚಿತ್ರಗಳಿಗೆ ಪೂಜೆ ಸಲ್ಲಿಸುವ ಮೂಲಕ ಪ್ರಾರಂಭಗೊಂಡ ಕಾರ್ಯಕ್ರಮದಲ್ಲಿ ಗ್ರಾಮದ ಪಂಚಾಯತಿ ಹಾಗೂ ಬಸ್ ನಿಲ್ದಾಣದ ಆವರಣವನ್ನು ಕಸ ಗುಡಿಸುವ ಮೂಲಕ "ನನ್ನ ನಡಿಗೆ ಸ್ವಚ್ಛತೆಯ ಕಡೆಗೆ" ಘೋಷವಾಕ್ಯದ ಸ್ವಚ್ಛತಾ ಕಾರ್ಯಕ್ರಮಕ್ಕೆ ಸಾಂಕೇತಿಕವಾಗಿ ಚಾಲನೆಗೊಳಿಸಲಾಯಿತು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಾಲಾ ಆಶೋಕ ಮೋಟಗಿ, ಉಪಾಧ್ಯಕ್ಷೆ ಪ್ರೇಮಾ ಪ್ರಭು ಗೋವಿಂದಗೋಳ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದರ, ಮಾಜಿ ಅಧ್ಯಕ್ಷ ಆನಂದ ಕವಟಿ, ಪ್ರಭು ಮುಧೋಳ, ಅಶೋಕ ಮೋಟಗಿ, ನಾಗಪ್ಪಾ ಆಲಕನೂರ, ಹಾಗೂ ಸಿಬ್ಬಂದಿ ಸಿಆರ್‌ಸಿ ಶ್ರೀಮತಿ ದ್ರಾಕ್ಷಾಯಿಣಿ ಮಂಡಿ, ಎಸ್.ವೈ. ಬಿರಾದರ, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಹಲವಾರು ಜನ ಪಾಲ್ಗೊಂಡಿದ್ದರು.

ಇದೇ ಸಂಧರ್ಬದಲ್ಲಿ ಗಾಂಧಿ ಜಯಂತಿ ಪ್ರಯುಕ್ತ ಹಮ್ಮಿಕೊಂಡ ಕ್ವಿಜ್ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನಿಡಿ ಗೌರವಿಸಲಾಯಿತು.

# ಮುಡಾ ಪ್ರಕರಣ–ವಿಪಕ್ಷಗಳಿಂದ ಸಿಎಂ ಶಕ್ತಿ–ಜನಪ್ರೀಯತೆ ಕುಗ್ಗಿಸುವ ಪ್ರಯತ್ನ: ವಿಪ ಸದಸ್ಯೆ ಉಮಾಶ್ರೀ



**ಮಹಾಲಿಂಗಪುರ :** ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಶಕ್ತಿ, ಜಾತ್ಯಾತೀತ ಜನನಾಯಕ ಸಿದ್ದರಾಮಯ್ಯನವರು ಮಾತ್ರ ಎರಡು ವಿರೋಧ ಪಕ್ಷಗಳನ್ನು ಏಕಕಾಲಕ್ಕೆ ಎದುರಿಸುವ ಶಕ್ತಿ ಹೊಂದಿದ್ದಾರೆ. ಅವರ ಪತ್ನಿ ಹೆಸರಿನಲ್ಲಿರುವ ಮುಡಾ ಕೇಸ್‌ನ್ನು ರಾಜಕೀಯಕ್ಕೆ ಎಳೆದು ತಂದು ಸಿದ್ದರಾಮಯ್ಯನವರ ಜನಪ್ರೀಯತೆ ಮತ್ತು ಶಕ್ತಿಯನ್ನು ಕುಗ್ಗಿಸುವ ಪ್ರಯತ್ನ ವಿರೋಧ ಪಕ್ಷಗಳು ಮಾಡುತ್ತಿವೆ ಎಂದು ಮಾಜಿ ಸಚಿವೆ, ವಿಪ ಸದಸ್ಯೆ ಉಮಾಶ್ರೀ ಹೇಳಿದರು.

ಬುಧವಾರ ಪಟ್ಟಣದ ಜಿಎಲ್‌ಬಿಸಿ ಅತಿಥಿ ಗೃಹದಲ್ಲಿ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸಿಎಂ ಅವರ ಪತ್ನಿ ಪಾರ್ವತಮ್ಮನವರ ತವರುಮನೆಗೆ ಸಂಬಂಧಿಸಿದ ಆಸ್ತಿಯನ್ನು ಮುಡಾಗೆ ಬಿಟ್ಟು, ಅದಕ್ಕೆ ಪರ್ಯಾಯವಾಗಿ 14 ಸೈಟ್‌ಗಳನ್ನು ಪಡೆದುಕೊಂಡಿದ್ದಾರೆ. ಇದು ಸಿಎಂ ಅವರ ಪಿರ್ತಾಜಿತ ಆಸ್ತಿಯಲ್ಲ, ಅವರ ಸ್ವಂತ ಆಸ್ತಿಯಲ್ಲ. ಅದಕ್ಕಾಗಿ ಅವರು ಅಧಿಕಾರ ದುರ್ಬಳಕೆ ಮಾಡಿಕೊಂಡಿಲ್ಲ. ಮುಖ್ಯವಾಗಿ ಸಿಎಂ ಪತ್ನಿಯು ಎಂದಿಗೂ ರಾಜಕೀಯ ಮಾಡಿದವರಲ್ಲ. ಅಂತಹ ಹೆಣ್ಣುಮಕ್ಕಳನ್ನು ರಾಜಕೀಯಕ್ಕೆ ಎಳೆದುತಂದು ಆ ಹೆಣ್ಣುಮಗಳಿಗೆ ನೋವು ಉಂಟು ಮಾಡಿ ವಿಪಕ್ಷಗಳು ವಿಕೃತ ಕೆಲಸ ಮಾಡುತ್ತಿವೆ.

ವಿರೋಧ ಪಕ್ಷಗಳಿಗೆ ಪ್ರಶ್ನೆ ಮಾಡುವಂತಹ ಧೀಮಂತ ನಾಯಕ ಸಿದ್ದರಾಮಯ್ಯನವರ ರಾಜಕೀಯ ಜೀವನಕ್ಕೆ ಕಪ್ಪುಚುಕ್ಕೆ ತರಲು ಯತ್ನಿಸಲಾಗುತ್ತಿದೆ. ಮುಡಾ ಪ್ರಕರಣದಲ್ಲಿ ಸಿಎಂ ಅವರಿಂದ ಯಾವುದೇ ಅವ್ಯವಹಾರ ನಡೆದಿಲ್ಲ. ಕಾಂಗ್ರೆಸ್ ಪಕ್ಷದ ವಿಪ ಸದಸ್ಯರು, ಸಚಿವರು, ಶಾಸಕರು, ಪಕ್ಷದ ಅಪಾರ ಬೆಂಬಲಿಗರು, ಅವರ ಅಭಿಮಾನಿಗಳು ಸೇರಿದಂತೆ ಎಲ್ಲರೂ ಸಿಎಂ ಅವರೊಂದಿಗೆ ನಿಲ್ಲುತ್ತೇವೆ. 2ಜಿ ಹಗರಣದ ತೀರ್ಪಿನ ಮಾದರಿಯಂತೆ ಮುಡಾ ಕೇಸ್‌ನಿಂದ ಸಿಎಂ ಅವರು ನ್ಯಾಯಾಲಯದಲ್ಲಿ ಆರೋಪ ಮುಕ್ತರಾಗುತ್ತಾರೆ ಎಂಬ ವಿಶ್ವಾಸವ್ಯಕ್ತಪಡಿಸಿದರು.

ಕುಟುಂಬವೇ ಬೇರೆ, ರಾಜಕಾರಣವೇ ಬೇರೆ. ಪತಿಯ ಗೌರವಕ್ಕಿಂತ ಆಸ್ತಿ ದೊಡ್ಡದಲ್ಲ ಎಂದು ಪಾರ್ವತಮ್ಮ ಮುಡಾಗೆ ಸೈಟ್‌ಗಳನ್ನು ವಾಪಸ್ ಮಾಡಿದ್ದನ್ನು ಸ್ವಾಗತಿಸುತ್ತೇನೆ. ಆದರೆ ಅವರು ಕಳೆದಕೊಂಡ ಭೂಮಿಗೆ ಕಾನೂನು ಪ್ರಕಾರ ಸಂಬಂಧಿಸಿದಷ್ಟು ಸೈಟ್‌ಗಳನ್ನು ಕೊಡಬೇಕು ಅಲ್ವಾ?. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯನವರ ಶಕ್ತಿಯನ್ನು ಕುಗ್ಗಿಸಿ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲಕ ರಾಜ್ಯದಲ್ಲಿ ಅಪಾರ ಜನಬೆಂಬಲ ಮೂಲಕ ಅಧಿಕಾರಕ್ಕೆ ಬಂದ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಹುನ್ನಾರ ನಡೆಸಿವೆ ಎಂದು ಆರೋಪಿಸಿದರು.

ವಿಪಕ್ಷಗಳ ಷಡ್ಯಂತ್ರದಿಂದ ಮುಡಾ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ. ಇದೊಂದು ಸುಳ್ಳಿನ ಕಂತೆಯಾಗಿದೆ. ಧೀಮಂತ ನಾಯಕನ ಹೆಸರು ಕೆಡಿಸಿ ರಾಜಕೀಯವಾಗಿ ಒಬ್ಬ ವ್ಯಕ್ತಿ, ಒಂದು ಸರ್ಕಾರ,

ಒಂದು ಪಕ್ಷವನ್ನು ನಿರ್ನಾಮ ಮಾಡುವ ಪ್ರಯತ್ನ ನಡೆದಿದೆ. ಅದಕ್ಕೆ ಅವಕಾಶ ನೀಡದಂಡೆ ನಮ್ಮ ಪಕ್ಷದ ಹೈಕಮಾಂಡ ಸೇರಿದಂತೆ ನಾವೆಲ್ಲರೂ ಅವರಿಗೆ ಬೆಂಬಲವಾಗಿ ನಿಂತಿದ್ದೇವೆ. ಮುಡಾಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ನಡೆದ ಸೈಟ್ ಹಂಚಿಕೆಗಳ ಸಮಗ್ರ ತನಿಖೆ ನಡೆಯಲ್ಲಿ. ಅದರಲ್ಲಿ ಇಲ್ಲಿಯವರೆಗೂ ಕಾಲಕಾಲಕ್ಕೆ ಭಾಗಿಯಾದ ಎಲ್ಲಾ ಪಕ್ಷಗಳ ನಾಯಕರ ನಿಜವಾದ ಮುಖವಾಡ ರಾಜ್ಯದ ಜನತೆಗೆ ಗೊತ್ತಾಗಬೇಕು ಎಂದು ಒತ್ತಾಯಿಸಿದರು.

# ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಸ್ವಚ್ಛತಾ ಹಿ ಸೇವಾ ಜಾಗೃತಿ ಜಾಥಾ ಹಾಗೂ ಶ್ರಮಧಾನ




**ಬಾಗಲಕೋಟೆ :** ಸ್ವಭಾವ ಸ್ವಚ್ಛತಾ, ಸಂಸ್ಕಾರ ಸ್ವಚ್ಛತಾ, ಎಂಬ ಸ್ವಚ್ಛತಾ ಹಿ ಸೇವಾ ಕಾರ್ಯಕ್ರಮದ ನಿಮಿತ್ಯ ಸ್ವಚ್ಛತಾ ಅಭಿಯಾನವನ್ನು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಜಾಗೃತಿ ಜಾಥಾ ಮೂಲಕ ಅರಿವು ಮೂಡಿಸುವುದುರ ಜೋತೆಗೆ ಹಳೆ ಬಾಗಲಕೋಟೆ ಬಸ್ ನಿಲ್ದಾಣದಲ್ಲಿ ಶ್ರಮಧಾನ ಗೌದು ಜಾಗೃತಿ ಮೂಡಿಸಿದರು. ಬಿ.ವಿ.ವಿ.ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕ, ಭಾರತ ಸ್ಕೌಟ್ ಅಂಡ್ ಗೈಡ್ ಹಾಗೂ ಭಾರತೀಯ ನೆಹರು ಯುವ ಕೇಂದ್ರ ಮತ್ತು ಗೌರಿ ಗಣೇಶ ಸಂಸ್ಕೃತಿಕ ಸಂಘ ಕೆರೂರ ಸಹಯೋಗದಲ್ಲಿ ಸೋಮವಾರ ಸ್ವಚ್ಛತಾ ಹಿ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಅಭಿಯಾನಯಕ್ಕೆ ಚಾಲನೆ ನೀಡಿ ಮಾತನಾಡಿದ ಮಹಾವಿದ್ಯಾಲದ ಪ್ರಾಚಾರ್ಯರ ಡಾ. ಜಗನ್ನಾಥ ಚವ್ಹಾಣ ಅವರು ಮಹಾತ್ಮ ಗಾಂಧೀಜಿಯವರು ಹೇಳಿದಂತೆ ಸ್ವಚ್ಛತೆಯು ಉಸಿರಾದರೆ ಜೀವನ ಹಸಿರು ಮನೆ ಯಾಗುತ್ತದೆ ಅದಕ್ಕಾಗಿ ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ,ಮಹಾತ್ಮ ಗಾಂಧೀಜಿಯವರ ಪರಂಪರೆಯನ್ನು ಗೌರವಿಸಲು ಮತ್ತು ಸ್ವಚ್ಛತೆಯನ್ನು ಜೀವನದ ಮಾರ್ಗವನ್ನಾಗಿ ಮಾಡಲು ಶ್ರಮದಾನದ ಮೂಲಕ ಸಮಾಜದ ಸಹಭಾಗಿತ್ವದ ಮೂಲಕ ಸ್ವಚ್ಛತೆಯ ಅರಿವನ್ನು ಮೂಡಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಪ್ರೋ.ಎಸ್.ಐ.ಪತ್ತಾರ ಮಾತನಾಡಿ ಈ ಸ್ವಭಾವ ಸ್ವಚ್ಛತಾ ಸಂಸ್ಕಾರ ಸ್ವಚ್ಛತಾ ಕಾರ್ಯಕ್ರಮ ಸಾಮೂಹಿಕ ಪ್ರಕ್ರಿಯೆ ಚೈತನ್ಯವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನವಾಗಿ ಎಂದರು.

ನೆಹರು ಯುವ ಕೇಂದ್ರದ ಮುಖ್ಯಸ್ಥರಾದ ಶ್ರೀಮತಿ ಸುಷ್ಮಾ ಗೌಳಿ ಮಾತನಾಡಿ ಸ್ವಚ್ಚತೆಗಾಗಿ ಕೇಂದ್ರ ಸರಕಾರದಿಂದ ಸಾಕಷ್ಟು ೦ಯೋಜನೆಗಳು ಈಗಾಗಲೆ ಸಾಕಾರಗೊಂಡು ಯಶಸ್ಸು ಕಂಡಿವೆ, ಈ ಸ್ವಚ್ಚತಾ ಹಿ ಸೇವಾ ಅಭಿಯಾನದಲ್ಲಿ ಇಂದಿನ ಯುವ ಶಕ್ತಿ ಪಾಲ್ಗೋಂಡು ಯಶಸ್ವಿಗೊಳಿಸಿ ಎಂದರು

ಐ.ಕ್ಯೂ. ಎ. ಸಿ ಸಂಯೋಜಕರಾದ ಶ್ರೀಮತಿ ಜಿ.ಎಂ ನಾವದಗಿ, ಸಿಬ್ಬಂದಿ ಕಾರ್ಯದರ್ಶಿಗಳಾದ ಎಂ ನಂಜುಂಡಸ್ವಾಮಿ, ಎನ್.ಎನ್.ಎಸ್ ಅಧಿಕಾರಿಗಳಾದ ಡಾ. ಎಂ ಎಂ ಹುದ್ದಾರ, ಗೌರಿ ಗಣೇಶ ಸಂಸ್ಕೃತಿಕ ಸಂಘ ಅಧ್ಯಕ್ಷರಾದ ಶ್ರೀಮತಿ ಪವಿತ್ರ ಜಕ್ಕಣ್ಣವರ, ನೆಹರು ಯುವಕೇಂದ್ರದಪದಾಧಿಕಾರಿಗಳಾದಶ್ರೀರಾಮರಾವ್ ಬಿರಾದಾರ, ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಎಂ ಎಚ್ ಚನ್ನಪ್ಪಗೋಳ, ದೈಹಿಕ ನಿರ್ದೇಶಕರಾದ ಡಾ.ಎಸ್ ಎಸ್ ಕೋಟ್ಯಾಳ್, ಡಾ.ಬ.ವೀ.ಖೋತ, ಶ್ರೀಮತಿ ಅಮೃತ ಗದ್ದನಕೇರಿ, ಶ್ರೀಮತಿ ಆಯ್ಕೆ ಮಠದ, ಪಿ.ಎಸ್. ಮಠದ ಅವರು ಸ್ವಚ್ಛತಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿವಿದ್ಯಾರ್ಥಿಗಳಿಗೆ ನೆಹರು ಯುವ ಕೇಂದ್ರದವರು ಟೀ ಶರ್ಟ್, ಕ್ಯಾಪ್ ಹಾಗೂ ನೋಟ್ ಪ್ಯಾಡಗಳನ್ನು ವಿತರಿಸಿಲಾಯಿತು. ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಿಂದ ಪ್ರಾರಂಭವಾಗ ಜಾಗೃತಿ ಜಾಥಾ ಹಳೆ ಬಸ್ ನಿಲ್ದಾಣದ ವರೆಗೆ ನಡೆದು ಅಲ್ಲಿ ಎಲ್ಲ ವಿದ್ಯಾರ್ಥಿಗಳು ಶ್ರಮಧಾನ ಮೂಲಕ ಸ್ವಚ್ಚತೆಗೊಳಿಸಿ ಜನರಲ್ಲಿ ಜಾಗೃತಿ ಮೂಡಿಸಿದರು.

# ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ "ಥೆಮಿಲಿಯೋಸ್"2024 ಬಿಎಚ್‌ಎಮ್‌ಎಸ್ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ



**ಬಾಗಲಕೋಟೆ :** ಬಿ.ವಿ.ವಿ.ಸಂಘ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಮಾಡುತ್ತಿದ್ದು, ಸಮಾಜದ ಒಳಿತಾಗಿ ಅತ್ಯುತ್ತಮ ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಸೃಷ್ಟಿಸಿದೆ ಎಂದು ಮಾಜಿ ಶಾಸಕರು, ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬಿ.ಎಚ್. ಎಮ್.ಎಸ್ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ "ಥೆಮಿಲಿಯೋಸ್"2024ರ ನ್ನು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಲೋಪಥಿಕ್ ಚಿಕಿತ್ಸೆಯ ಮಧ್ಯದಲ್ಲಿ ಇಂದು ಹೋಮಿಯೋಪಥಿಕ್ ಚಿಕಿತ್ಸೆಗೆ ಭಾರಿ ಡಿಮ್ಯಾಂಡ್ ಪಡೆಯುತ್ತಿದೆ. ಈ ಔಷಧ ಪದ್ಧತಿ ಜಗತ್ತಿನಾದ್ಯಂತ ಕ್ರಮೇಣ ಮಾನ್ಯತೆ ಪಡೆದಿದ್ದು, ಭಾರತದಲ್ಲಿಯೂ ಈಗ ಅತಿ ಹೆಚ್ಚು ಪ್ರಚಾರ ವಾಗಿದೆ,

ವಿಶ್ವ ಆರೋಗ್ಯ ಸಂಸ್ಥೆ ಹೋಮಿಯೋಪಥಿಯನ್ನು ಜಗತ್ತಿನ ಎರಡನೇ ಅತಿ ದೊಡ್ಡ ವೈದ್ಯಕೀಯ ಪದ್ಧತಿಯೆಂದು ಘೋಷಿಸಿದೆ.

ಹೋಮಿಯೋಪಥಿ ಔಷಧಿ ಸರಳ, ಸುರಕ್ಷಿತ, ಸೇವಿಸಲು ಸುಲಭ, ಮಿತವ್ಯಯಕರ, ಮತ್ತು ಪರಿಣಾಮಕಾರಿಯಾಗಿದೆ. ಅಡ್ಡ ಪರಿಣಾಮವಿಲ್ಲದ ಕಾರಣ ಇಂದು ಈ ಔಷಧಿ ಪ್ರಖ್ಯಾತಿ ಪಡೆಯುತ್ತಿದೆ. ಗ್ರಾಮೀಣಿ ಪ್ರದೇಶದ ಜನರು ಈ ಔಷಧಿಯ ಮೊರೆ ಹೋಗುತ್ತಿದ್ದಾರೆ. ಈ ಎಲ್ಲ ವಿಷಯಗಳನ್ನು ವಿದ್ಯಾರ್ಥಿಗಳು ಗಮನದಲ್ಲಿಟ್ಟುಕೊಂಡು ಶ್ರೆಷ್ಠ ವೈದ್ಯರಾಗಿ ಸಮಾಜದ ಸೇವೆ ಮಾಡುವ ಮೂಲಕ ತಂದೆ ತಾಯಿ, ಗುರು ಮತ್ತು ಗುರುಗಳ ಋಣ ತಿರಿಸಿ ಎಂದರು.

ಗೌರವ ಕಾರ್ಯದರ್ಶಿ ಮಹೇಶ ಅಥಣಿ ಮಾತನಾಡಿ ನಮ್ಮ ಸಂಸ್ಥೆಯ ಪ್ರಥಮ ಬಿ.ಎಚ್.ಎಮ್.ಎಸ್ ಕೊಡುಗೆ ಇದಾಗಿದೆ. ಅತೀ ಕಡಿಮೆ ಅವಧಿಯಲ್ಲಿ ಹೋಮಿಯೋಪಥಿ ಮಹಾವಿದ್ಯಾಲಯವು ಗಣನೀಯ ಸಾಧನೆ ಮಾಡಿದೆ. ಹೋಮಿಯೋಪಥಿಯನ್ನು ಸಮಾಜದ ಕೊನೆಯ ವ್ಯಕ್ತಿಗೂ ತಲುಪಿಸುವ ಪ್ರಮಾಣಿಕ ಪ್ರಯತ್ನ ಮಾಡಬೇಕೆಂದರು.

ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಮಾತನಾಡಿ ಹೋಮಿಯೋಪಥಿ ವೈದ್ಯ ಪದ್ಧತಿಯೇ ಒಂದು ವಿಶೇಷ ಪದ್ದತಿಯಾಗಿದೆ ಈ ನಿಟ್ಟಿನಲ್ಲಿ ಉಪನ್ಯಾಸಕರು –ವೈದ್ಯ ವಿದ್ಯಾರ್ಥಿಗಳು ಮರಣಾಂತಿಕ, ಸಾಂಕ್ರಾಮಿಕ – ಅಸಾಂಕ್ರಾಮಿಕ ರೋಗಗಳ ಕುರಿತು ಸಂಶೋಧನೆ ಮಾಡಿ, ಈ ನಿಟ್ಟಿನಲ್ಲಿ ಸಂಘದಿಂದ ಎಲ್ಲ ರೀತಿಯ ಸಹಾಯ ಸಹಕಾರ ನೀಡಲಾಗುವುದು. ಅಂತಿಮ ವರ್ಷ ಅಂದರೆ ಇದೇ ಕೊನೆಯಂದು ತಿಳಿಯಬೇಡಿ ಶಿಕ್ಷಣಕ್ಕೆ ಕೊನೆಯೇ ಇಲ್ಲ ಕೊನೆಯ ಉಸಿರಿರುವರೆಗೆ ನಿರಂತರವಾಗಿ ಕಲಿಯುತ್ತಿರಬೇಕೆಂದರು.

ಪ್ರಾಚಾರ್ಯ ಡಾ.ಅರುಣ ಹೂಲಿ ಸ್ವಾಗತಿಸಿ ಮಹಾವಿದ್ಯಾಲಯ ಸಾಗಿ ಬಂದ ಮೈಲಿಗಲ್ಲನ್ನು ವಿವರಿಸಿದರು.ಪ್ರಾಧ್ಯಾಪಕ ಡಾ. ರವಿ. ಕೋಟೆಣ್ಣವರ ವಂದಿಸಿದರು.ಸಮಾರಂಭದಲ್ಲಿ ಬವಿವ ಸಂಘದ ಪದಾಧಿಕಾರಿಗಳಾದ ಅಶೋಕ ಸಜ್ಜನ, ಮಹಾಂತೇಶ ಕಕರೆಡ್ಡಿ. ಗುರುಬಸವ ಸೂಳಿಭಾವಿ, ಕುಮಾರ ಹಿರೇಮಠ, ಅಶೋಕ ಕರಡಿ, ಮಹಾಂತೇಶ ಶೆಟ್ಟರ.

ವೈದ್ಯ ವಿದ್ಯಾರ್ಥಿಗಳು ವಿದ್ಯಾ ಸಂಸ್ಥೆ ಗುರುಗಳ ಕುರಿತು ಅನನ್ಯ ಮಧುರವಾದ ಅನಿಸಿಕೆಗಳನ್ನು ಹಂಚಿಕೊಂಡರು. ಪದವಿ ಮುಗಿಸಿದ ಹಿರಿಯ ವಿದ್ಯಾರ್ಥಿಗಳನ್ನು ಹೃದಯ ಸ್ಪಷವಾಗಿ ಬೀಳ್ಕೊಡುವ ಸಮಾರಂಭ ಏರ್ಪಡಿಸಿದ ಕಿರಿಯ ವಿದ್ಯಾರ್ಥಿಗಳೂ ಕೂಡ ಹಿರಿಯ ವಿದ್ಯಾರ್ಥಿಗಳ ಮಾರ್ಗದರ್ಶನ, ಅವಿನಾಭಾವ ಸಂಬಂಧ ಕುರಿತು ಅನಿಸಿಕೆಗಳನ್ನು ಹಂಚಿಕೊಂಡರು.

ವೈದ್ಯ ವಿದ್ಯಾರ್ಥಿಗಳು ತಮ್ಮ ಹಿರಿಯ ವಿದ್ಯಾರ್ಥಿಗಳಿಗೆ ಕಾಲೇಜು ಸಂಸತ್ತಿನ ಪ್ರತಿನಿಧಿಗಳಾದ ಸೃಷ್ಟಿ ತೋಟದ, ಪೈಜಾನ ನಾಲಬಂದ. ರಔಜಿತಾ ನವಲಿ, ಭಾಗ್ಯ ಗಂಗಶೆಟ್ಟಿ. ಕಾರ್ತಿಕ ವಸ್ತದ , ತೃಪ್ತಿ ಬೋಡಕೆ. ಅಂಬಿಕಾ ಅವಟೆ. ಸರ್ವಮಂಗಳಾ ಯರವಿನತಲಿಮಠ. ತರಗತಿಗಳ ಪ್ರತಿನಿಧಿಗಳಾಗಿ ಪೂರ್ವಿ ಹಿರೇಮಠ. ಸಂಜಯ ಸಾವಂತ, ರಿಶಿಕೇಶ .ಶ್ರೀಮಂತ ಸಜ್ಜನ ರವರ ನೇತೃತ್ವದಲ್ಲಿ ಸಾಂಸ್ಕೃತಿಕ ಸಲಹಾ ಮಂಡಳಿಯ ಡಾ.ವಿಜಯಲಕ್ಷ್ಮಿ ಪಾಟೀಲ, ಡಾ.ವಿನೋದ ಕೆ. ಡಾ.ಶಮಶಾದ ಅಂಕಲಗಿ ಯವರ ಮಾರ್ಗದರ್ಶನದಲ್ಲಿ ಎಲ್ಲರ ಗಮನ ಸೆಳೆವ ಮನಮೋಹಕ ವಿವಿಧ ಶಾಸ್ತ್ರೀಯ ಹಾಗೂ ಆಧುನಿಕ ನೃತ್ಯ, ಸುಮಧುರ ಗೀತೆಗಳೊಂದಿಗೆ ವಿದಾಯ ಹೇಳಿದರು.

# ಸಸಾಲಟ್ಟಿ ಸೌಹಾರ್ದ ಬ್ಯಾಂಕ್ ಅಧ್ಯಕ್ಷರಾಗಿ ಈಶ್ವರ ಉಪಾಧ್ಯಕ್ಷರಾಗಿ ರವಿ ಆಯ್ಕೆ



**ತೇರದಾಳ :** ಸಸಾಲಟ್ಟಿ ಸೌಹಾರ್ದ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಈಶ್ವರ ಮಠಪತಿ ಹಾಗೂ ಉಪಾಧ್ಯಕ್ಷರಾಗಿ ರವಿ ಸಲಬನ್ನವರ ಅವಿರೋಧವಾಗಿ ಆಯ್ಕೆಗೊಂಡರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಅಧ್ಯಕ್ಷ ಈಶ್ವರ ಮಠಪತಿ, ತಮ್ಮ ಅಧಿಕಾರವಧಿಯಲ್ಲಿ ಬ್ಯಾಂಕಿನ ಏಳಿಗೆಗೆ ಶ್ರಮಿಸುವ ಭರವಸೆ ನೀಡಿದ ಅವರು, ಎಲ್ಲ ನಿರ್ದೇಶಕರು ಹಾಗೂ ಸಿಬ್ಬಂದಿ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ನಿರ್ದೇಶಕರಾದ ಸುರೇಶ ಮರಡಿ, ರಮೇಶ ಇಂಗಳೆ, ಶಿವಾನಂದ ಮಂಟೂರ, ರಮೇಶ ಬಡಿಗೇರ, ರಮೇಶ ಬೆಂಡಿಕಾಯಿ, ಸಂತೋಷ ಹುಕ್ಕೇರಿ, ಬಸವರಾಜ ಮರಡಿ, ಕಾರ್ಯದರ್ಶಿ ನಹೀಂ ಪೆಂಡಾರಿ ಇದ್ದರು.

# ರಾಜಕೀಯ ವ್ಯವಸ್ಥೆಯನ್ನು ಪರಿಶುದ್ಧಗೊಳಿಸಬೇಕಾದ ಅಗತ್ಯವಿದೆ: ಸಂಸದ ಕಡಾಡಿ




**ಮೂಡಲಗಿ :** ರಾಜಕೀಯ ಹಿನ್ನಲೆ ಇಲ್ಲದ ಅಭಿವೃದ್ಧಿ ಪರ ಕಳಕಳಿ ಇರುವ ಒಂದು ಲಕ್ಷ ಯುವಕರು ರಾಜಕೀಯ ಕ್ಷೇತ್ರ ಪ್ರವೇಶ ಮಾಡುವ ಮೂಲಕ ರಾಜ್ಯದಲ್ಲಿ ಮೌಲ್ಯಾಧಾರಿತ ರಾಜಕಾರಣ ಜಾರಿಗೆ ತಂದು ಕುಲುಷಿತಗೊಂಡಿರುವ ರಾಜಕೀಯ ವ್ಯವಸ್ಥೆಯನ್ನು ಪರಿಶುದ್ಧಗೊಳಿಸಬೇಕಾದ ಅಗತ್ಯವಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಬುಧವಾರ ಕಲ್ಲೋಳಿ ಪಟ್ಟಣದಲ್ಲಿ ಬಿಜೆಪಿ ಸದಸ್ಯತಾ ಅಭಿಯಾನ 2024ರ ಅಂಗವಾಗಿ ಆಯೋಜಿಸಿದ ಕಾರ್ಯಕರ್ತರ ಸಭೆಯಲ್ಲಿ ಮಿಸ್ ಕಾಲ್ ನೀಡುವ ಮೂಲಕ ಸದಸ್ಯತಾ ಅಭಿಯಾನಕ್ಕೆ ಚಾಲನೆ ನೀಡಿ ಸಂಸದ ಈರಣ್ಣ ಕಡಾಡಿ ಅವರು ಮಾತನಾಡಿದರು.

ಯಾರು ರಾಜಕೀಯ ಕ್ಷೇತ್ರವನ್ನು ಕುಲುಷಿತಗೊಳಿಸಿದ್ದಾರೋ ಅಂತವರೇ ರಾಜಕಾರಣವನ್ನು ಪರಿಶುದ್ಧಗೊಳಿಸುವ ಬಗ್ಗೆ ಮಾತನಾಡುತ್ತಾರೆ. ಇದು ಅತ್ಯಂತ ಹಾಸ್ಯಾಸ್ಪದ ಸಂಗತಿ. ಆದಕಾರಣ ಯುವಕರು ರಾಜಕೀಯ ಕ್ಷೇತ್ರದಲ್ಲಿ ಗಟ್ಟಿಯಾಗಿ ಬೇರುರೂವ ಮೂಲಕ ಕುಟುಂಬ ರಾಜಕಾರಣ, ಭ್ರಷ್ಟಾಚಾರ, ಸೃಜನ ಪಕ್ಷಪಾತಗಳನ್ನು ಧಿಕ್ಕರಿಸಿ ಮೌಲ್ಯಾಧಾರಿತ ರಾಜಕಾರಣ ಮಾಡುವ ಮೂಲಕ ರಾಜಕೀಯ ಪಕ್ಷಗಳ ಆಂತರಿಕ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕಾಗಿ ವಿನಂತಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರಿಂದ ಚಾಲನೆಗೊಂಡಿರುವ ಬಿಜೆಪಿ ಸದಸ್ಯತಾ ಅಭಿಯಾನ ದೇಶದಾದ್ಯಂತ ವೇಗ ಪಡೆದಿದೆ. ಪಕ್ಷದ ಕಾರ್ಯಕರ್ತರು ಗ್ರಾಮದ ಪ್ರತಿ ಮನೆ ಮನೆಗೂ ತೆರಳಿ ಬಿಜೆಪಿ ಪಕ್ಷದ ತತ್ವಸಿದ್ಧಾಂತ ಹಾಗೂ ಪ್ರಧಾನಿ ಮೋದಿ ಆಡಳಿತದ ಬಗ್ಗೆ ಜನರಿಗೆ ಮನವರಿಕೆ ಮಾಡುವ ಕೆಲಸ ಮಾಡಬೇಕು ಇದು ಮುಂಬರುವ ಜಿ,ಪಂ, ತಾ.ಪಂ ಸೇರಿದಂತೆ ಸ್ಥಳೀಯ ಚುನಾವಣೆಗೆ ಸಹಕಾರಿಯಾಗಲಿದೆ ಎಂದರು.

ಹಿಂದೆಲ್ಲ ಸದಸ್ಯತಾ ಅಭಿಯಾನಗಳು ಆಫ್‌ಲೈನ್ ಮುಖಾಂತರ ನಡೆಸಲಾಗುತ್ತಿತ್ತು. ಕಾಲಕ್ಕೆ ತಕ್ಕಂತೆ ಬಿಜೆಪಿ ಪಕ್ಷವು ಆಧುನಿಕತೆಗೆ ಮಾರ್ಪಾಡು ಹೊಂದಿದ್ದು, ಅನ್‌ಲೈನ್ ಮುಖಾಂತರ ಪಕ್ಷದ ಸದಸ್ಯತ್ವನೋಂದಣಿಗೆ ಮುಂದಾಗಿದೆ.ದೂರವಾಣಿ8800002024 ಸಂಖ್ಯೆಗೆ ಮಿಸ್ ಕಾಲ್ ಕೊಡುವ ಮೂಲಕ ಸದಸ್ಯತ್ವ ಪಡೆಯಬಹುದು. 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಪಕ್ಷದ ಸದಸ್ಯರಾಗಲು ಅರ್ಹತೆ ಹೊಂದಿದ್ದಾರೆ. ಲಿಂಗ, ಜಾತಿ, ಧರ್ಮ ಯಾವುದೇ ಬೇಧವಿಲ್ಲದೇ ಪ್ರತಿಯೊಬ್ಬರನ್ನು ಪಕ್ಷದ ಸದಸ್ಯರನ್ನಾಗಿಸಲು ಮುಂದಾಗಬೇಕು ಎಂದರು. ಇದೇ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ದೇಶದ ಮಾಜಿ ಪ್ರಧಾನ ಮಂತ್ರಿ ಲಾಲ್ ಬಹಾದ್ದೂರ್ ಶಾಸ್ತ್ರೀಜಿ ಅವರ ಜಯಂತಿಯ ಅಂಗವಾಗಿ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ಪ್ರಮುಖರಾದ ಬಸವರಾಜ ಕಡಾಡಿ, ರಾಯಪ್ಪ ಬಾನಸಿ, ಶ್ರೀಕಾಂತ ಕೌಜಲಗಿ, ಆನಂದ ಮೂಡಲಗಿ, ಸದಾಶಿವ ನೇರ್ಲಿ, ಬಸವರಾಜ ಮಾಡಲಗಿ, ಬಸವರಾಜ ಹಿಡಕಲ್,ಶ್ರೀಶೈಲಧವಳೇಶ್ವರ,ಮಹಾದೇವ ಮಸರಗುಪ್ಪಿ, ಬಸವರಾಜ ಗಾಡವಿ, ಬಾಳೇಶ ಸಕ್ರೆಪ್ಪಗೋಳ, ಬಸವರಾಜ ಹುಡೇದ, ಲಗಮಣ್ಣ ಕುಳ್ಳೂರ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು. ಶ್ರೀಶೈಲ ಪೂಜೇರಿ ನಿರೂಪಿಸಿದರು. ಪರಪ್ಪ ಗಿರೆಣ್ಣವರ ವಂದಿಸಿದರು.

# ಗಾಂಧೀಜಿ ಅವರ ಕನಸನ್ನು ಸಕಾರಗೊಳಿಸೋಣ: ಶ್ರೀ ಕೊಯಪ್ಪನವರ




**ಧಾರವಾಡ :** ಗ್ರಾಮ ಅಭಿವೃದ್ಧಿ ಆದರೆ ದೇಶ ಅಭಿವೃದ್ಧಿ ಆದಂತೆ, ಗ್ರಾಮ ಸ್ವಚ್ಛತೆಯಿಂದ ಉತ್ತಮ ಆರೋಗ್ಯ ಸಾಧ್ಯ, ಇದು ಮಹಾತ್ಮ ಗಾಂಧೀಜಿ ಅವರ ಕನಸು ಆಗಿದೆ . ಸ್ವಚ್ಛತೆ ಎಲ್ಲಿ ಇರುತ್ತದೆಯೋ ಅಲ್ಲಿ ಅಭಿವೃದ್ಧಿ ಇರುತ್ತದೆ. ಗಾಂಧೀಜಿ ಅವರ ಕನಸನ್ನು ಸಕಾರ ಗೊಳಿಸೋಣ ಎಂದು ಮರೆವಾಡ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್. ಎಸ್. ಎಸ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಮರೆವಾಡ ಗ್ರಾಮ ಪಂಚಾಯಿತ, ಅಂಜುಮನ್ ಪದವಿ ಮಹಾವಿದ್ಯಾಲಯದ ಎನ್ಎಸ್ಎಸ್ ಘಟಕ,ಕರ್ನಾಟಕ ಗ್ರಾಮೀಣ ಸಂವರ್ಧನ ಜೀವೊನಪಾಯ ಸಂಸ್ಥೆ ಸಂಯೋಗದಲ್ಲಿ ಸ್ವಚ್ಛತಾ ಹಿ ಸೇವಾ ಅಭಿಯಾನದ ಅಡಿಯಲ್ಲಿ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಎನ್ ಎಸ್ ಎಸ್ ವಿದ್ಯಾರ್ಥಿಗಳು, ಸದಸ್ಯರು ಮತ್ತು ಸಿಬ್ಬಂದಿ, ಸಂಜೀವಿನಿ ಮತ್ತು ಅಂಗನವಾಡಿ ಕಾರ್ಯಕರ್ತರ ಸಂಯೋಗದಲ್ಲಿ ಸ್ವಚ್ಛತಾ ಈ ಸೇವಾ ಅಭಿಯಾನದ ಅಡಿಯಲ್ಲಿ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಪಂಚಾಯತ ಅಧ್ಯಕ್ಷರಾದ ಶ್ರೀ ಈರಪ್ಪ ಪೂಜಾರ, ಶ್ರೀಮತಿ ಸುನಿತಾ ಹಡಪದ, ಪಂಚಾಯ ತಿ ಸದಸ್ಯರು ಶ್ರೀ ಮಹಾಂತಯ್ಯ್ ಹಿರೇಮಠ್, ಶ್ರೀಮತಿ ರೇಣುಕಾ ತಡಕೋಡ್, ಎನ್ಎಸ್ಎಸ್ ಅಧಿಕಾರಿಗಳಾದ ಡಾ. ನಾಗರಾಜ್ ಗುದಗನವರ್, ಡಾ. ತಾಜುನ್ನಿಸಾ, ಐ ಕ್ಯೂ ಎ ಸಿ ಸಂಚಾಲಕರಾದ ಡಾ. ಎನ್ ಬಿ ನಾಲತವಾಡ, ಪ್ರೊ. ಮುಬಾರಕ್ ಮುಲ್ಲಾ ಅಭಿಯಾನದಲ್ಲಿ ಭಾಗವಹಿಸಿದ್ದರು.

# ಬಯಲಾಟ ಜನಪದ ಕಲೆಗಳಲ್ಲೇ ಗಂಡು ಕಲೆ



**ಧಾರವಾಡ :** ಬಯಲಾಟ ಜನಪದ ಕಲೆಗಳಲ್ಲೇ ಗಂಡು ಕಲೆ. ಇದು ನಮ್ಮಗ್ರಾಮೀಣ ಭಾರತದ ಜೀವಾಳ ಎಂದುಕರ್ನಾಟಕ ಬಯಲಾಟಅಕಾಡಮಿಅಧ್ಯಕ್ಷರಾದಡಾ. ಕೆ ಆರ್ದುರ್ಗಾದಾಸ್ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಎಂ.ಟಿ, ಎ.ಟಿ, ಬಿ.ಟಿ ಮತ್ತುಎಚ್.ಟಿ.ಸಾಸನೂರ ಸಹೋದರರ ಸಂಸ್ಮರಣದತ್ತಿ ಅಂಗವಾಗಿ ಆಯೋಜಿಸಿದ್ದ ವಿಶೇಷ ವ್ಯಾಖ್ಯಾನ ಮಾಲೆ 26 ಕಾರ್ಯಕ್ರಮದಲ್ಲಿ ಬಯಲಾಟಗಳು ಹಾಗೂ ಕನ್ನಡ ಭಾಷೆ' ವಿಷಯಗಳ ಕುರಿತು ಅವರು ಮಾತನಾಡುತ್ತಿದ್ದರು. ಮುಂದುವರೆದು, ಬಯಲಾಟಗ್ರಾಮೀಣಅನಕ್ಷರಸ್ಥರ ಮಧ್ಯ ಸೃಷ್ಟಿಯಾದಜನಪದ ಕಲೆ. ರೈತಾಪಿ ಜನರು ಸುಗ್ಗಿಯ ನಂತರ ವಿರಾಮದ ವೇಳೆಯಲ್ಲಿ, ಜಾತ್ರೆ ಹಾಗೂ ಹಬ್ಬಗಳಲ್ಲಿ ಮನರಂಜನೆಗಾಗಿಆಡುವಕಲೆಯಾಗಿದೆ. ಬಯಲಾಟಯಾವುದೇಜಾತಿಗೆ ಸೀಮಿತವಾಗಿಲ್ಲ?ಯ ಎಲ್ಲಜಾತಿ, ಧರ್ಮದವರನ್ನು ಒಳಗೊಂಡು ಈ ಬಯಲಾಟಆಡುವರು. ಉತ್ತರಕರ್ನಾಟಕದ ಬಹಳಷ್ಟು ಕಲಾವಿದರು ಬಯಲಾಟದ ಮೂಲಕವೇ ತಮ್ಮಕಲಾಪ್ರೌಢಿಮೆಯನ್ನು ಹೆಚ್ಚಿಸಿಕೊಂಡಿದ್ದಾರೆ.

ಬಯಲಾಟದಲ್ಲಿ ಪೌರಾಣಿಕ ಸನ್ನಿವೇಶಗಳೆ ಕಥಾವಸ್ತುಗಳು. ರಾಮಾಯಣ, ಮಹಾಭಾರತದಆಯ್ದ ಪ್ರಸಂಗಗಳನ್ನು ಅನಕ್ಷರಸ್ಥಕಲಾವಿದರು ಪುಟಗಟ್ಟಲೇಕಂಠಪಾಠದ ಮೂಲಕ ಸಂಸ್ಕೃತ ಶ್ಲೋಕವನ್ನೂತಮ್ಮ ಸಿರಿಕಂಠದಿಂದ ಅಭಿವ್ಯಕ್ತಗೊಳಿಸುತ್ತಾರೆ. ಬಯಲಾಟಕ್ಕೆ ಸಂಗೀತ, ಹಾಡು, ನೃತ್ಯಗಳೇ ಜೀವಾಳ. ಕಲಾವಿದರ ಸೃಜಶೀಲತೆ ಅಗಾಧವಾದದ್ದು.ಈ ಆಟವ ]ಅಹೋರಾತ್ರಿಆಡುವಒಂದುಜನಪದಕಲೆಂಯಾಗಿದೆ.

ಕರಾವಳಿ ಭಾಗದಲ್ಲಿಯಕ್ಷಗಾನವುತನ್ನ ದೇಆದ ವೈಶಿಷ್ಟ್ಯವನ್ನು ಹೊಂದಿದ್ದರೆ, ಉತ್ತರಕರ್ನಾಟಕದಲ್ಲಿ ಬಹುಪಾಲು ಜಿಲ್ಲೆಗಳಲ್ಲಿ ಬಯಲಾಟಗಳು ಪ್ರದರ್ಶನಗೊಳ್ಳುತ್ತವೆ. ಈ ಬಯಲಾಟಗಳು ಗ್ರಾಮೀಣಜನರ ನೈತಿಕತೆಯನ್ನು ಹೆಚ್ಚಿಸುವಲ್ಲಿ ಮತ್ತು ಸನ್ಮಾರ್ಗದಲ್ಲಿ ನಡೆಯಲು ಪ್ರೇರೆಪಿಸುತ್ತವೆ. ಬಯಲಾಟಅಕಾಡೆಮಿಕಲಾವಿದರನ್ನು ಹಾಗೂ ಕಲೆಯನ್ನು ಉಳಿಸಿ ಬೆಳೆಸಲು ಕಾರ್ಯಪ್ರವೃತ್ತವಾಗುತ್ತಿದೆ.

ಯುವ ಕಲಾವಿದರು ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಗದಗದಜಾನಪದ ವಿದ್ವಾಂಸಡಾ.ಸಿದ್ಧಣ್ಣ ಜಕಬಾಳ ಮಾತನಾಡಿ, ನಮ್ಮಲ್ಲಿ ಶಿಷ್ಟ ಸಾಹಿತ್ಯಕ್ಕಿಂತ ಮೌಖಿಕ ಸಾಹಿತ್ಯವೇ ವಿಫುಲವಾಗಿ ಬೆಳೆದು ಬಂದಿದೆ. ವಿಶೇಷವಾಗಿ ಗ್ರಾಮೀಣಜನಪದರಿಂದ ರಚನೆಯಾದವರ್ಾಣ'ಗಳು ದೇಶಿ ಕಾವ್ಯದ ಮಾರ್ಗಗಳಾಗಿವೆ. ಜನಪದರಂಗಭೂಮಿಕರ್ನಾಟಕದಲ್ಲಿ ಸಮೃದ್ಧವಾಗಿ ಬೆಳೆದು ಬಂದಒಂದು ವೈವಿಧ್ಯಮಯ ಕಲೆಯಾಗಿದೆ. ಬಯಲಾಟದಲ್ಲಿ ಲಯವೇ ಪ್ರಧಾನವಾದ ಅಂಶ ಎಂದು ಹೇಳಿ ಜನಪದ ಕಲೆಗಳ ಆಯ್ದ ಪ್ರಸಂಗಗಳ ಹಾಡುಗಳನ್ನು ಮನೋಜ್ಞವಾಗಿ ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಕ.ವಿ.ವ. ಸಂಘದ ಪರವಾಗಿಕರ್ನಾಟಕ ಬಯಲಾಟಅಕಾಡೆಮಿಯಅಧ್ಯಕ್ಷರಾಗಿ ನೂತನವಾಗಿ ನೇಮಕಗೊಂಡಡಾ. ಕೆ.ಆರ್.ದುರ್ಗಾದಾಸ್ಅವರನ್ನುಆತ್ಮೀಯತೆಯಿಂದ ಸನ್ಮಾನಿಸಿ, ಗೌರವಿಸಲಾಯಿತು. ದತ್ತಿದಾನಿಗಳ ಪರವಾಗಿಕೆ.ಎಚ್. ಕಾಕನೂರದತ್ತಿಆಶಯ ಮತ್ತು ಸಾಸನೂರ ಸಹೋದರರಕುರಿತು ಮಾತನಾಡಿದರು. ಸತೀಶತುರಮರಿ ಸ್ವಾಗತಿಸಿದರು.ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಶ್ವೇಶ್ವರಿ ಬ.ಹಿರೇಮಠ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು.

# ನಗರದಲ್ಲಿ ದರೋಡೆಕೋರರ ಗ್ಯಾಂಗ್ ಬಂಧನ

**ಹುಬ್ಬಳ್ಳಿ :** ನಗರದ ಹೊರವಲಯದ ಗದಗ ರಸ್ತೆಯ ವರ್ತುಲ ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನು ಅಡ್ಡಗಟ್ಟಿ ದರೋಡೆ ಮಾಡುತ್ತಿದ್ದ ದರೋಡೆಕೋರರ ಗ್ಯಾಂಗ್ ಅನ್ನು ಬೆಂಡಿಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುದ್ದಿಗಾರರಿಗೆ ಈ ವಿಷಯವನ್ನು ಹು–ಧಾ ಪೊಲೀಸ್ ಆಯುಕ್ತರಾದ ಎನ್. ಶಶಿಕುಮಾರ ತಿಳಿಸಿದರು. ಗಂಗಾಧರನಗರದ ಭೀಮರಾವ್ ತಾವರಗೊಪ್ಪ, ರವಿ ಗೋಕಾಕ್, ಕೆ.ಬಿ. ನಗರದ ದೀಪಕ ನರಗುಂದ, ಶ್ರೀನಿವಾಸ ವೀರಾಪುರ, ಸೋನಿಯಾಗಾಂಧಿ ನಗರದ ಶಶಿಕುಮಾರ್ ಸಾತಪತಿ, ಗೋಪನಕೊಪ್ಪದ ನಾಗರಾಜ ಬಳ್ಳಾರಿ ಬಂಧಿತ ಆರೋಪಿಗಳು. ಅವರಿಂದ ಪೊಲೀಸರು 4,100 ನಗದು ಸೇರಿದಂತೆ ಕೃತ್ಯಕ್ಕೆ ಬಳಸಿದ್ದ ಆಟೊ, ಎರಡು ದ್ವಿಚಕ್ರ ವಾಹನ, ಚಾಕು ಹಾಗೂ ಖಾರದ ಪುಡಿ ಪ್ಯಾಕೆಟ್ ವಶಪಡಿಸಿಕೊಂಡಿದ್ದಾರೆ.

ಹೊರವಲಯದ ವರ್ತುಲ ರಸ್ತೆಯಲ್ಲಿ ರಾತ್ರಿ ವೇಳೆ ಸಂಚರಿಸುತ್ತಿದ್ದ ಬೈಕ್ ಸವಾರರನ್ನು ಹಾಗೂ ಲಾರಿಗಳನ್ನು ಆರೋಪಿಗಳು ಅಡ್ಡಗಟ್ಟಿ ಬೆದರಿಸುತ್ತಿದ್ದರು. ಕಣ್ಣಿಗೆ ಖಾರದ ಪುಡಿ ಎರಚಿ, ಚಾಕುವಿನಿಂದ ಹಲ್ಲೆ ಮಾಡಿ ಹಣ, ಚಿನ್ನಾಭರಣ ಸೇರಿದಂತೆ ಅತ್ಯಮೂಲ್ಯ ವಸ್ತುಗಳನ್ನು ದೋಚುತ್ತಿದ್ದರು. ಬೆಂಡಿಗೇರಿ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು.

ಆರೋಪಿಗಳ ಪತ್ತೆಗೆ ಇನ್‌ಸ್ಪೆಕ್ಟರ್ ಎಸ್. ಆರ್. ನಾಯಕ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಪಿಐ ಎಸ್.ಆರ್. ನಾಯಕ್, ಪಿಎಸ್ಐ ರವಿ ವಡ್ಡರ, ಎಎಸ್ಐ ಟಿ.ಎನ್. ಸವದತ್ತಿ, ಸಿಬ್ಬಂದಿಯಾದ ಪಿ.ಜಿ. ಪುರಾಣಿಕಮಠ, ಎನ್.ಐ. ನಿಲಗಾರ್, ಪಿ.ಎಫ್.ಅಂಬಿಗೇರ್, ಆರ್. ಎಸ್.ಹರ್ಕಿ, ರಮೇಶ ಹಿತ್ತಲಮನಿ, ಹನುಮಂತ ಕರಗಾವಿ, ಸೋಮು ಮೇಟಿ, ಬಸವರಾಜ ಗಳಗಿ, ಗುಡ್ಡಪ್ಪ ಒಗ್ಗಣ್ಣವರ, ಬಸು ಗೌಡರ, ಹನುಮಂತ ಆಲೂರ ಕಾರ್ಯಾಚರಣೆಯಲ್ಲಿಪಾಲ್ಗೊಂಡಿದ್ದರು.

# "ತಲ್ಲೂರರಾಯನಗೌಡರು ನಡೆದು ಬಂದದಾರಿ" ಉಪನ್ಯಾಸ ಕಾರ್ಯಕ್ರಮ



**ಧಾರವಾಡ :** ದಿ. ತಲ್ಲೂರರಾಯನಗೌಡ್ರು ಪಾಟೀಲ ಭವ್ಯ ಭಾರತದ ಉಜ್ವಲ್ ಕನಸುಗಾರರು ಹಾಗೂ ಮಹಾನ್‌ದೇಶ ಭಕ್ತರು. ಸಮಾಜ ಸೇವೆಯೇ ದೇವರ ಸೇವೆ ಎಂದು ಬಾಳಿದ ಸಾರ್ಥಕ ಜೀವಿಗಳು ಎಂದು ಮುರಗೋಡ ಪ.ಪೂ. ಮಹಾವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕಎನ್. ಬಿ.ಮಲಕಣ್ಣವರ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ತಲ್ಲೂರರಾಯನಗೌಡ ಪಾಟೀಲ ಸ್ಮಾರಕ ಸಂಸ್ಥೆಯ ದತ್ತಿ ಕಾರ್ಯಕ್ರಮದಲ್ಲಿ ತಲ್ಲೂರರಾಯನಗೌಡರು ನಡೆದು ಬಂದದಾರಿ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡಿದರು.

ದಿ.ತಲ್ಲೂರರಾಯನಗೌಡ್ರು ಪಾಟೀಲರದು ಬಹುಮುಖ ವ್ಯಕ್ತಿತ್ವ, ವಾಸ್ತವಿಕ ಬದುಕು. ಶ್ರೇಷ್ಠ ಕೃಷಿಕರಾದಅವರು ಬ್ರಿಟಿಷ ಸರಕಾರದ ಆ ಅವಧಿಯಲ್ಲಿರೈತರಿಗೆ ವೈಜ್ಞಾನಿಕ ಕೃಷಿ ಉಪಕರಣಗಳ ಬಳಕೆ–ಯ ಬಗ್ಗೆ ಉಪಯುಕ್ತ ಮಾಹಿತಿ ನೀಡುತ್ತಿದ್ದರು.ಸಹಕಾರತತ್ವದಡಿ ಸಹಕಾರಿ ಸಂಘ ಸ್ಥಾಪಿಸಿ ಜನಸೇವೆ ಮಾಡಿದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಕ.ವಿ.ವ. ಸಂಘದಅಧ್ಯಕ್ಷಚಂದ್ರಕಾಂತಗುರಪ್ಪ ಬೆಲ್ಲದ ಮಾತನಾಡಿ, ಮಹಾನ್ ಪ್ರತಿಭಾ ಸಂಪನ್ನರಾದ ದಿ. ರಾಯನಗೌಡ್ರು ಪಾಟೀಲರದು ದಿವ್ಯ ವ್ಯಕ್ತಿತ್ವ. ಘನವಾದ ಬದುಕು.ಆ ಪ್ರಾತಃಸ್ಮರಣೀಯರಜೀವನ ಸಂದೇಶಗಳು ಭವಿಷ್ಯದ ಪೀಳಿಗೆಗೆ ಪ್ರೇರಕವಾಗಲೆಂದು ಹೇಳಿದರು.

ವೇದಿಕೆಯಲ್ಲಿ ದತ್ತಿದಾನಿ ದೇವಿಕಾರಾಣಿ ಬ.ಪಾಟೀಲ ಉಪಸ್ಥಿತರಿದ್ದರು.

ವೀರಣ್ಣಒಡ್ಡೀನ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.ಶಂಕರ ಕುಂಬಿ ನಿರೂಪಿಸಿದರು.ಶಿವಾನಂದ ಭಾವಿಕಟ್ಟಿ ವಂದಿಸಿದರು.

ಡಾ. ಜಿನದತ್ತ ಹಡಗಲಿ, ಡಾ. ಧನವಂತ ಹಾಜವಗೋಳ, ಬಿ.ಎಲ್. ಪಾಟೀಲ, ಎಸ್.ಜಿ. ಪಾಟೀಲ, ಶಂಕರಲಿಂಗ ಶಿವಳ್ಳಿ, ಮನೋಜ ಪಾಟೀಲ, ಗುರುತಿಗಡಿ, ಗೌರಮ್ಮ ವಾಲಿ, ಶಂಕರಗೌಡ ಪಾಟೀಲ, ಎಂ.ಎಂ. ಚಿಕ್ಕಮಠ, ಬಿ.ಕೆ.ಹೊಂಗಲ್, ಡಾ. ಬಾಳಪ್ಪ ಚಿನಗುಡಿ, ಸದಾನಂದ ಶಿವಳ್ಳಿ ಸೇರಿದಂತೆ ರಾಯನಗೌಡ್ರ ಪರಿವಾರದವರು ಉಪಸ್ಥಿತರಿದ್ದರು.

# ಮಹಾತ್ಮರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಲು ಕರೆ: ಸುನಂದಾ ಭಜಂತ್ರಿ



**ಮೂಡಲಗಿ :** ಮಹಾತ್ಮರ ತತ್ವ ಆದರ್ಶಗಳನ್ನು ನಡೆ ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮಹಾತ್ಮರುತೋರಿಸಿದಮಾರ್ಗದಲ್ಲಿನಡೆದುಒಳ್ಳೆಯ ಸಮಾಜವನ್ನು ಕಟ್ಟಬೇಕೆಂದು ಗ್ರಾಮ ಪಂಚಾಯತ ಸದಸ್ಯೆ ಸುನಂದಾ ಭಜಂತ್ರಿ ಹೇಳಿದರು.

ತುಕ್ಕಾನಟ್ಟಿಯ ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ರಾಷ್ಟ್ರಪಿತ ಮಹಾತ್ಮಾ ಗಾಂದೀಜಿಯವರ 155 ನೇ ಜಯಂತಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರೀಜಿಯವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಗಾಂದೀಜಿಯವರ ಸತ್ಯ ಪ್ರಾಮಾಣಿಕತೆ ಅಹಿಂಸಾತ್ಮಕ ತತ್ವಗಳನ್ನು ಹಾಗೂ ಲಾಲ್ ಬಹದ್ದೂರ ಶಾಸ್ತ್ರಿಜೀಯವರ ಸರಳತೆ ಸಜ್ಜನಿಕೆಯನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಸಫಾಯಿ ಕರ್ಮಚಾರಿಗಳಾದ ಪಾರ್ವತಿ ದೊಡಮನಿ, ರೇಣುಕಾ ಹರಿಜನ, ಸಂತವ್ವಾ ಹರಿಜನ, ದುಂಡಪ್ಪಾ ಹರಿಜನ ಇವರನ್ನು ಶಾಲೆಯವತಿಯಿಂದ ಗೌರವಿಸಲಾಯಿತು. ಸ್ವಚ್ಛತಾ ಹೀ ಕಾರ್ಯಕ್ರಮದ ಅಂಗವಾಗಿ ನಡೆದ ವಿವಿಧ ಸ್ಪರ್ದೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪಂಚಾಯತ ಹಾಗೂ ಶಾಲೆಯವತಿಯಿಂದ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿಗ್ರಾಮಪಂಚಾಯತಅಧ್ಯಕ್ಷೆಅಕ್ಕವ್ವಾ ಅರಭಾಂವಿ, ಉಪಾದ್ಯಕ್ಷ ಭರಮಣ್ಣ ಹರಿಜನ, ಯಲ್ಲವ್ವ ಬಿಳಿಗೌಡ್ರ, ರಾಮಪ್ಪಾ ಬಾಗೇವಾಡಿ, ಸಿಬ್ಬಂದಿಗಳಾದ ವಿಠ್ಠಲ ಮಾವರಕರ, ರಾಜು ಡೊಡಮನಿ,. ಶಿಕ್ಷಕರಾದ ವಿಮಲಾಕ್ಷಿ ತೋರಗಲ್ಲ, ಲಕ್ಷ್ಮೀ ಹೆಬ್ಬಾಳ, ಪುಷ್ಪಾ ಭರಮದೆ, ಸುಜಾತಾ ಕೋಳಿ, ಪ್ರಿಯಾಂಕಾ ಡಿ.ಕೆ., ಬಸವರಾಜ ನಾಯಿಕ. ಸೋಮಶೇಖರ ವಾಯ್ ಆರ್. ಮುಂತಾದವರು ಹಾಜರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಧಾನ ಗುರು ಎ,ವ್ಹಿ ಗಿರೆಣ್ಣವರ ವಹಿಸಿದ್ದರು. ಕಾರ್ಯಕ್ರಮದ ನಿರ್ವಹಣೆ ಎಮ್.ಡಿ. ಗೋಮಾಡಿ ನಿರ್ವಹಿಸಿದರು.

# ಕನ್ನಡ ಸಂಘದಿಂದ ನ.8ರಿಂದ ದೇಶಿ ಕ್ರೀಡಾಕೂಟ: ಶಹಾ




**ಜಮಖಂಡಿ :** 59 ವಸಂತದಲ್ಲಿರುವ ಸ್ಥಳೀಯ ಕನ್ನಡ ಸಂಘದಿಂದ ನವೆಂಬರ 8, 9 ಮತ್ತು 10 ರಂದು ವಿವಿಧ ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸಂಘದ ಅಧ್ಯಕ್ಷ ಅರುಣಕುಮಾರ ಶಹಾ ಹೇಳಿದರು.

ನಗರದ ಅರ್ಬನ ಬ್ಯಾಂಕ ಸಭಾಭವನದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕುಸ್ತಿ, ಸೈಕ್ಲಿಂಗ್ ಮತ್ತು ಸಂಗ್ರಮಕಲ್ಲು ಎತ್ತುವ ಸ್ಪರ್ಧೆಯ ಜೊತೆಗೆ ವಿವಿಧ ದೇಶಿ ಕ್ರೀಡೆಗಳನ್ನು ಹಮ್ಮಿಕೊಳ್ಳಾಗಿದೆ ಎಂದರು.

ಕನ್ನಡ ಸಂಘಕ್ಕೆ ತನ್ನದೇಯಾದ ಇತಿಹಾಸವಿದ್ದು, ಕನ್ನಡ ಸಂಘ ಹಮ್ಮಿಕೊಂಡಿರುವ ಕ್ರೀಡೆಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳು ಉನ್ನತ ಸರಕಾರಿ ಹುದ್ದೆಗಳನ್ನು ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ಸಂಘ ಯಾವುದೇ ಪ್ರಶಸ್ತಿಗಾಗಿ ಹುಟ್ಟಿಕೊಂಡಿಲ್ಲ. ರಾಜ್ಯ ಸರಕಾರ ರಾಜ್ಯೋತ್ಸವ ಪ್ರಶಸ್ತಿಗಾಗಿ ಅರ್ಜಿ ಹಾಕಲಾಗಿದೆ. ಯಾವುದೇ ರೀತಿಯ ಒತ್ತಡ ಹೇರುವದಿಲ್ಲ. ಸರಕಾರವೇ ಗುರುತಿಸಿ ಪ್ರಶಸ್ತಿ ನೀಡುವದಾರೇ ನೀಡಲಿ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಜಿ.ಎಸ್.ನ್ಯಾಮಗೌಡ ಮಾತನಾಡಿ, ಕನ್ನಡ ಸಂಘದ ಕಾರ್ಯಕ್ರಮಗಳು ಒಂದು ದಿನದ ಕಾರ್ಯಕ್ರಮವಾಗದೇ ನಿರಂತರವಾಗಿ ಕ್ರೀಡೆಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬೇಕು. ಆರಂಭ ಶೂರರಾಗದೇ ಕನ್ನಡ ಬೆಳವಣಿಗೆಗೆ ಪ್ರತ್ಯಕ್ಷ, ಪರೋಕ್ಷವಾಗಿ ಶ್ರಮಿಸಬೇಕಾಗಿದೆ. ಜಮಖಂಡಿಯಲ್ಲಿ ಕನ್ನಡ ಉಳವಿಗಾಗಿ ಅನೇಕ ಹೋರಾಟಗಳು ನಡೆದಿವೆ. ಕನ್ನಡ ಸಂಘದ ಸದಸ್ಯರ ಸಂಖ್ಯೆ ಹೆಚ್ಚಾಗಬೇಕಾಗಿದೆ. ಸಂಘದ ಎಲ್ಲ ಸದಸ್ಯರು ವಂತಿಕೆ ಸಂಗ್ರಹದಲ್ಲಿ ಕೈಜೋಡಿಸಬೇಕು ಎಂದರು.

ಡಾ.ಉಮೇಶ ಮಹಾಬಳಶೆಟ್ಟಿ ಮಾತನಾಡಿದರು. ವೇದಿಕೆಯಲ್ಲಿ ಅರ್ಬನ ಬ್ಯಾಂಕಿನ ಸದಸ್ಯರಾದ ಫಕೀರಸಾಬ ಬಾಗವಾನ, ಎ.ಆರ್.ಶಿಂಧೆ, ಕನ್ನಡಸಂಘದ ಕಾರ್ಯದರ್ಶಿ ಬಸವರಾಜ ನ್ಯಾಮಗೌಡ, ನಗರಸಭೆ ನೂತನ ಅಧ್ಯಕ್ಷ ಪರಮಾನಂದ ಗವರೋಜಿ, ದೇವಲ ದೇಸಾಯಿ, ನ್ಯಾಯವಾದಿ ಚನ್ನಪ್ಪ ಬಾಂಗಿ, ಭೀಮು ಕಮರಡಗಿ ಸಹಿತ ಹಲವರು ಇದ್ದರು.

# ಕಲಬುರಗಿ ವಲಯ ಮಟ್ಟದ ವಾಲಿಬಾಲ್ ಪಂದ್ಯಾವಳಿ: ಬಿಎಲ್‌ಡಿಇ ಆಯುರ್ವೇದ ಕಾಲೇಜಿಗೆ ತೃತೀಯ ಸ್ಥಾನ



**ವಿಜಯಪುರ :** ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯದ ಪುರುಷರ ಮತ್ತು ಮಹಿಳೆಯರ ತಂಡಗಳು ಆಳಂದದಲ್ಲಿ ಬುಧವಾರ ನಡೆದ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಲಬುರ್ಗಿಯ ವಲಯ ಮಟ್ಟದ ವಾಲಿಬಾಲ ಪಂದ್ಯಾವಳಿಯಲ್ಲಿ ತೃತೀಯ ಸ್ಥಾನ ಪಡೆದಿವೆ.

ಈ ಪಂದ್ಯಗಳ ಪುರುಷರ ವಿಭಾಗದಲ್ಲಿ ವಿದ್ಯಾರ್ಥಿಗಳಾದ ಮಾಂತೇಶ, ಮಹಾದೇವ, ವಿರುಪಾಕ್ಷ, ಅಮರ, ವೀರೇಶ, ನಿತಿನ, ಶುಭಂ, ಅಭಿಷೇಕ, ಅಖಿಲೇಶ, ಶರಣಗೌಡ, ವಿನಯಕುಮಾರ, ತುಷಾರ ಅವರನ್ನೊಳಗೊಂಡ ತಂಡ ತೃತೀಯ ಸ್ಥಾನ ಗಳಸಿದೆ.

ಮಹಿಳೆಯರ ವಿಭಾಗದಲ್ಲಿ ವಿದ್ಯಾರ್ಥಿನಿಯರಾದ ಜೆಜಮ್ಮ, ರಶ್ಮಿ, ಸೌಮ್ಯ, ಕೃತಿಕಾ, ಪೂಜಾ, ಚನ್ನಮ್ಮ ಮೋದಿ, ಚನ್ನಮ್ಮ ಜೆ, ಸಹನಾ ಅವರನ್ನೊಳಗೊಂಡ ತಂಡ ತೃತೀಯ ಸ್ಥಾನ ಗಳಿಸಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ, ಆಡಳಿತ ಮಂಡಳಿ, ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ, ದೈಹಿಕ ನಿರ್ದೇಶಕ ಹನಮಂತ ಪವಾರ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

# 9ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಭ್ರಮದಿಂದ ಆಚರಿಸೋಣ



**ಜಮಖಂಡಿ :** ಕನ್ನಡ ನಾಡು ನುಡಿ ಎಂಬುದು ನಮ್ಮ ಉಸಿರು ಮುಡಿಪಾಗಿಟ್ಟು, ಕನ್ನಡ ಸಾಹಿತ್ಯ ಸಮ್ಮೇಳನ ಸಂಭ್ರಮ ವಿಜೃಂಭಣೆಯಿಂದ ಆಚರಿಸಬೇಕು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಸಾಕ್ಷಾತ್ಕಾರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಚಾರ ಸಾಮಗ್ರಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅಕ್ಟೋಬರ್ 13 ರಂದು ನಡೆಯಲಿರುವ 9ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ವೇದಾಂತ ಸಹಜಾನಂದ ಅವಧೂತರು ವೇದಿಕೆ ಅಲಂಕರಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು, ಅಥಣಿ ಮೋಟಗಿ ಮಠದಶ್ರೀ, ವಿಶೇಷ ಸಾಹಿತಿಗಳು ಆಗಮಿಸಲಿದ್ದಾರೆ. ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದಲ್ಲಿ ಸಂಚಿಕೆ ಬಿಡುಗಡೆಯಾಗಲಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕದ ಕೋಶಾಧ್ಯಕ್ಷ ಡಾ.ಉಮೇಶ ಮಹಾಬಳಶೆಟ್ಟಿ ಮಾತನಾಡಿ, ಅ.13 ಮುಂಜಾನೆ 7 ಗಂಟೆಗೆ ಶಾಸಕರಿಂದ ಧ್ವಜಾರೋಹಣ, 8 ಗಂಟೆಗೆ ಹಳೆ ತಹಶೀಲ್ದಾರ ಕಛೇರಿ ಆವರಂಣದಿಂದ ಬಸವ ಭವನದವರೆಗೆ ಸಮ್ಮೇಳನಾಧ್ಯಕ್ಷರ ಹಾಗೂ ಕನ್ನಡಮಾತೆ ಭಾವಚಿತ್ರ ಮೆರವಣಿಗೆ ನಡೆಯಲಿದೆ. 10 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆ ನಂತರ ಮಹಿಳೆ, ದಲಿತ, ಸಾಹಿತ್ಯ ಮೂರು ಗೋಷ್ಠಿಗಳು ನಡೆಯಲಿವೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಸನ್ಮಾನ. ಪುಸ್ತಕ ಮಳಿಗೆಗಳು, ಛಾಯಾಚಿತ್ರ ಪ್ರದರ್ಶನ ನೆರವೇರಲಿವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕ ಅಧ್ಯಕ್ಷ ಸಂತೋಷ ತಳಕೇರಿ, ನ್ಯಾಯವಾದಿ ಎನ್.ಎಸ್.ದೇವರವರ, ಟಿ.ಪಿ.ಗಿರಡ್ಡಿ, ವಿನೋದ ಲೋಣಿ, ಸಾಹಿತಿ ರಾಮಥಾಳ ಸಹಿತ ಹಲವರು ಇದ್ದರು.

# ಸತತ ಪರಿಶ್ರಮದಿಂದ ಗುರಿ ಮುಟ್ಟಲು ಸಾಧ್ಯ: ಈರಪ್ಪ ದೇಯಣ್ಣವರ



**ಬೆಟಗೇರಿ :** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ಪ್ರತಿ ದಿನವೂ ಶಿಕ್ಷಕರ ಮಾರ್ಗದರ್ಶನದಲ್ಲಿ ಚೆನ್ನಾಗಿ ಅಧ್ಯಯನ ಮಾಡಿ ಅಂದುಕೊಂಡದ್ದನ್ನು ಸಾಧಿಸಬೇಕು ಎಂದು ಬೆಟಗೇರಿ ತಾಪಂ ಮಾಜಿ ಸದಸ್ಯ ಈರಪ್ಪ ದೇಯಣ್ಣವರ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಚೈತನ್ಯ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಇತ್ತೀಚೆಗೆ ನಡೆದ ಪಾಲಕರ ಸಭೆ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಮಾತನಾಡಿ, ವಿದ್ಯಾರ್ಥಿ ಜೀವನ ಅಮೂಲ್ಯವಾಗಿದೆ ಎಂದರು.

ಸ್ಥಳೀಯ ಚೈತನ್ಯ ಶಾಲೆಯ ಆಡಳಿತಾಧಿಕಾರಿ ರವಿ ಭರಮನಾಯ್ಕ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಶಿಕ್ಷಕ ಎಸ್.ವೈ.ಪಾಟೀಲ ಅತಿಥಿಗಳಾಗಿ ಮಾತನಾಡಿದರು.

ಚೈತನ್ಯ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ವಿವಿಧ ಅಧ್ಯಯನ ಮತ್ತು ಉನ್ನತ ವ್ಯಾಸಂಗಕ್ಕೆ ಆಯ್ಕೆಯಾದ ಶಾಲೆಯ ಹಳೆಯ ವಿದ್ಯಾರ್ಥಿಗಳನ್ನು ಈ ವೇಳೆ ಸತ್ಕರಿಸಲಾಯಿತು.

ಶಿಕ್ಷಣಪ್ರೇಮಿ ಬಸಪ್ಪ ಮೇಳೆಣ್ಣವರ, ಉಭಯ ಶಾಲೆಯ ಮುಖ್ಯಾಪಾಧ್ಯಯರಾದ ಕಮಲಾಕ್ಷಿ ನಾಯ್ಕ, ವಿದ್ಯಾಶ್ರೀ ಜನ್ಮಟ್ಟಿ, ಶರಿಪ್‌ಸಾಬ ನದಾಫ್, ಹೇಮಾವತಿ ಕಲಾದಗಿ, ಕಾವೇರಿ ಹೊಸಮಠ, ದೀಪಾ ಪಾಟೀಲ, ಪಾರ್ವತಿ ಮುಧೋಳ,

ಉಭಯ ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು, ಶಿಕ್ಷಣಪ್ರೇಮಿಗಳು, ಮತ್ತೀತರರು ಇದ್ದರು.

# ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆ



**ಜಮಖಂಡಿ :** ಪದವಿಪೂರ್ವ ಕಾಲೇಜುಗಳ ಮತ್ತು ಪ್ರಾಥಮಿಕ ಶಾಲೆಯ 2024-25ನೇ ಸಾಲಿನ ವಿದ್ಯಾರ್ಥಿಗಳಿಗಾಗಿ ನಡೆದಜಿಲ್ಲಾ ಮಟ್ಟದಕ್ರೀಡಾಕೂಟದಲ್ಲಿ ಸ್ಥಳೀಯ ಬಸವಜ್ಯೋತಿ ಪದವಿಪೂರ್ವಕಾಲೇಜಿನಇಬ್ಬರು ಹಾಗೂ ಪ್ರಾಥಮಿಕ ಶಾಲೆಯಒಬ್ಬ ವಿದ್ಯಾರ್ಥಿರಾಜ್ಯ ಮಟ್ಟದ ಸ್ಪರ್ಧೆಗೆಆಯ್ಕೆಯಾಗಿದ್ದಾರೆಎಂದು ಪ್ರಾಚಾರ್ಯಡಾ.ಟಿ.ಪಿ. ಗಿರಡ್ಡಿ ತಿಳಿಸಿದ್ದಾರೆ.

ಪದವಿಪೂರ್ವಕಾಲೇಜಿನ ಬಾಲಕರ ವಿಭಾಗದ 79 ಕೆಜಿತೂಕದ ಕುಸ್ತಿ ಸ್ಪರ್ಧೆಯಲ್ಲಿಅಭಿನಂದನ ಜುಗುಳ ಪ್ರಥಮ ಸ್ಥಾನ ಹಾಗೂ ಬಾಲಕಿಯರ ವಿಭಾಗದ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿಕಾವೇರಿ ಕೋಟ್ಯಾಳ ದ್ವಿತೀಯ ಸ್ಥಾನ ಪಡೆದುರಾಜ್ಯ ಮಟ್ಟದ ಸ್ಪರ್ಧೆಗೆಆಯ್ಕೆಯಾಗಿದ್ದಾರೆ.

ಪ್ರಾಥಮಿಕ ಶಾಲೆಯ 14 ವರ್ಷದೊಳಗಿನ ಬಾಲಕರ 100 ಮೀ ಬ್ಯಾಕ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಬಸವಜ್ಯೋತಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಪೃಥ್ವಿರಾಜ ಹಿರೇಮಠ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟದ ಸ್ಪರ್ಧೆಗೆಆಯ್ಕೆಯಾಗಿದ್ದಾರೆ.

ತರಬೇತುದಾರ ಮುತ್ತುಅಮ್ಮನಗಿ ಹಾಗೂ ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯಅಧ್ಯಕ್ಷಡಾ. ಗಿರೀಶಕಡ್ಡಿ, ಆಡಳಿತಾಧಿಕಾರಿ ಪ್ರೊ.ಬಸವರಾಜಕಡ್ಡಿತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದಿದ್ದಾರೆ.



**ಬನಹಟ್ಟಿ :** ಇಲ್ಲಿಯ ಅಂಚೆ ಇಲಾಖೆಯ ಸಿಬ್ಬಂದಿ ವರ್ಗದವರು ಮಹಾತ್ಮಾ ಗಾಂಧಿ ಜಯಂತ್ಯುತ್ಸವದ ಅಂಗವಾಗಿ ಹಮ್ಮಿಕೊಂಡ ಸ್ವಚ್ಛತಾ ಕಾರ್ಯಕ್ರಮದಲ್ಲಿ ನಗರದ ಕಾಡಸಿದ್ಧೇಶ್ವರ ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸಿದರು. ಪೋಸ್ಟ್ ಮಾಸ್ತರ್ ಶ್ರೀಶೈಲ ಮುಕದ್ದಮ, ವೀರಭದ್ರ ಮುಗಳ್ಯಾಳ, ಕಾಡು ಗುಣಕಿ, ಎಸ್. ಆರ್. ಕಲಾದಗಿ, ಮಹಾಂತೇಶ ಬೆನಕನಾಳ, ಮಹಾವೀರ ಗುರ್ಲಾಪುರ, ಐ. ಎ. ಮುನ್ನೊಳ್ಳಿ, ಸಿದ್ದು ಮಂಡಿ ಮತ್ತು ಸಾವಿತ್ರಿ ಮಠದ ಹಾಜರಿದ್ದರು.

# ವಿಜಯದಶಮಿ ಪ್ರಯುಕ್ತ ಕ್ರಿಕೆಟ್ ಆಯೋಜಿಸಿದ ಕೆಪಿಎಸ್ ಪತ್ರಕರ್ತರು ಪ್ರಥಮ ಬಾರಿಯಲ್ಲಿ ಅತ್ಯುತ್ತಮ ಗೆಲುವು ಸಾಧಿಸಿದ ಕೆಪಿಎಸ್ ತಂಡ

# ಕೆಪಿಎಸ್ ತಂಡ ವಿಜಯದಶಮಿಯ ದಿನದಂದು ವಿಜಯಶಾಲಿ

**ಕೊಟ್ಟೂರು :** ವಿಜಯದಶಮಿಯ ಪ್ರಯುಕ್ತ ಕರ್ನಾಟಕ ಪತ್ರಕರ್ತರ ಸಂಘದ ತಾಲ್ಲೂಕು ಘಟಕ ಕ್ರಿಕೆಟ್ ಆಯೋಜಿಸಲಾಗಿತ್ತು. ಒಟ್ಟು 10 ತಂಡಗಳು ಭಾಗವಹಿಸಿದ್ದವು. ಅಂತಿಮ ಪಂದ್ಯದ ಸೆಣಸಾಟಕ್ಕಾಗಿ ಹಳೆ ಕೊಟ್ಟೂರು ಮತ್ತು ಶಿಕ್ಷಕರ ಎ ತಂಡ ಸೆಮಿಫೈನಲ್ಲಿ ಹಣಾಹಣಿಯಾಗಿ ಹಳೆ ಕೊಟ್ಟೂರು ತಂಡ ಫೈನಲ್ಗೆ ಲಗ್ಗೆಯಿಟ್ಟಿತು. ನಂತರ ಆರೋಗ್ಯ ಇಲಾಖೆ ತಂಡ ಹಾಗೂ ಕರ್ನಾಟಕ ಪತ್ರಕರ್ತರ ಸಂಘ ಸೆಮಿಫೈನಲ್ಲಿ ರೋಚಕದ ಆಟವಾಡಿತು. ಈ ಪಂದ್ಯದಲ್ಲಿ ಗೌಸ್ ಅತ್ಯುತ್ತಮವಾಗಿ 103 ರನ್ಗಳ ಶತಕದ ಆಟವಾಡಿದರು. ಕರ್ನಾಟಕ ಪತ್ರಕರ್ತರ ಸಂಘ ಫೈನಲ್ಗೆ ಬಂದಿದ್ದವು. ಭಾನುವಾರ ಮಧ್ಯಾಹ್ನಹಳೆಕೊಟ್ಟೂರುಮತ್ತುಕರ್ನಾಟಕ ಪತ್ರಕರ್ತರ ಸಂಘದ ಫೈನಲ್ ಆಟವನ್ನು ಆಡಿದವು. ಫೈನಲ್ ಪಂದ್ಯಕ್ಕೆ ಬಿ.ಡಿ.ಸಿ.ಸಿ. ಬ್ಯಾಂಕ್ ಉಪಾಧ್ಯಕ್ಷ ಐ.ಎಂ.ದಾರುಕೇಶ್ ಟಾಸ್ ತೂರಿ ಆಟಗಾರರಿಗೆ ಪ್ರೋತ್ಸಾಹ ನೀಡಿ, ಕ್ರೀಡೆ ಜೀವನದಲ್ಲಿ ಬಹಳ ಮುಖ್ಯ. ಕ್ರೀಡೆಯಲ್ಲಿಭಾಗವಹಿಸುವಮೂಲಕದೈಹಿಕ ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳಬಹುದು



ಎಂಬ ಪ್ರೋತ್ಸಾಹದ ಮಾತುಗಳನ್ನಾಡಿ, ಬ್ಯಾಟಿಂಗ್ ನಡೆಸಿದರು. ಟಾಸ್ ಗೆದ್ದ ಹಳೆ ಕೊಟ್ಟೂರು ತಂಡ ಮೊದಲು ಬೌಲಿಂಗ್ ಆಯ್ದುಕೊಂಡಿತು. ನಿಗದಿತ 10 ಓವರ್ಗಳಲ್ಲಿ 130 ರನ್ ಪೇರಿಸಿದ ಕರ್ನಾಟಕ ಪತ್ರಕರ್ತರ ಸಂಘದಮರುಉತ್ತರವಾಗಿಹಳೆಕೊಟ್ಟೂರು ತಂಡ 7 ವಿಕಟ್ಗಳ ನಷ್ಟ ಅನುಭವಿಸಿ 92 ರನ್ ಗಳಿಸಲಷ್ಟೇ ಶಕ್ತವಾಯಿತು. ಅಂತಿಮ ಹಣಾಹಣಿಯಲ್ಲಿ ರೋಚಕವಾಗಿತ್ತು. ಅಂತಿಮವಾಗಿ ವಿಜಯದಶಮಿ ಕ್ರಿ-ಕೆಟ್ ಪಂದ್ಯವನ್ನು ಗೆಲ್ಲುವುದರ ಮೂಲಕ ತಾನೇ ಆಯೋಜಿಸಿದ್ದ ಪಂದ್ಯಾಟದಲ್ಲಿ ತಾನೇ ಗೆದ್ದು ವಿಜಯದ ಕಿರೀಟವನ್ನು ತನ್ನ ಮುಡಿಗೇರಿಸಿಕೊಂಡಿತು. ಕೊಟ್ಟೂರಿನ ಇತಿಹಾಸದಲ್ಲಿಇದುಮೊದಲಬಾರಿಗೆಇಂತಹ ಪಂದ್ಯಾಟದ ಆಯೋಜನೆಯಾಗಿದ್ದು ಇದೇ ಮೊದಲಾಗಿತ್ತು.

ಪಂದ್ಯಶ್ರೇಷ್ಠ ಮತ್ತು ಸರಣಿಶ್ರೇಷ್ಠ ಎರಡೂ ಪ್ರಶಸ್ತಿಗಳನ್ನು ಗೌಸ್ ರವರಿಗೆ ಬಂದಿತು. ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಕೊಟ್ರೇಶ್ ಸೆಮಿಫೈನಲ್ ಮ್ಯಾಚ್ನಲ್ಲಿ ಎರಡು ವಿಕೆಟ್ ಮತ್ತು ಫೈನಲ್ ಮ್ಯಾಚ್ನಲ್ಲಿ ರೋಚಕವಾಗಿ ಬೌಲಿಂಗ್ ನಡೆಸಿ, ಮೂರು ಓವರ್ಗಳಲ್ಲಿ ಆರು ವಿಕೆಟ್ ಪಡೆದು ಅತ್ಯುತ್ತಮವಾಗಿ ಆಟವಾಡಿದರು. ಹಿರಿಯ ವಕೀಲರಾದ ಸೋಮಣ್ಣ, ಎಸ್ ಎಂ ಪ್ರಕಾಶ್ ,ಡಿ ಲಿಂಗರಾಜ, ರಾಂಪುರ ರಮೇಶ್, ಬಾವಿಕಟ್ಟೆ ಶಿವಾನಂದ, ಪ್ರಭು, ಹಾಗೂ ವಕೀಲರ ಗುರು,ಆರೋಗ್ಯಾಧಿಕಾರಿಗಳಾದ ಬದ್ಯಾನಾಯ್ಕ, ಹಿರಿಯ ಶಿಕ್ಷಕ ಸಿದ್ರಾಮೇಶ್ವರ, ಬಣಕಾರ ಬಸವರಾಜ, ತಾಲ್ಲೂಕು ಪಂಚಾಯಿತಿ ಎ.ಡಿ. ವಿಜಯಕುಮಾರ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪಂದ್ಯಾವಳಿಗಳನ್ನು ವೀಕ್ಷಿಸಿ, ಆಟಗಾರರಿಗೆ ಪ್ರೋತ್ಸಾಹ ತುಂಬಿದರು. ಶಿರಿಬಿ ಪ್ರಕಾಶ್, ಸುಜಿ, ರಾಘು, ಮಂಜುನಾಥ್, ಕಿಚ್ಚ ಗುರು,ಇನ್ನು ಅನೇಕರು ಉತ್ತಮ ತೀರ್ಪುಗಾರರಿದ್ದರು ಕ್ರೀಡಾಂಗಣದಲ್ಲಿ ಕಿಕ್ಕಿರಿದ ಜನರಿಗೆ ರಸದೌತಣ ನೀಡಿದರು. ರನ್ನರ್ ಅಪ್ ಹಳೆ ಕೊಟ್ಟೂರು ತಂಡ ಮತ್ತು ಫೈನಲ್ನಲ್ಲಿ ಗೆಲುವನ್ನು ಸಾಧಿಸಿದ ಕರ್ನಾಟಕ ಪತ್ರಕರ್ತರ ಸಂಘಕ್ಕೆ ಹಿರಿಯ ಪತ್ರಕರ್ತರು ಕೆ ಎಂ ಚಂದ್ರಶೇಖರ್,ಸರ್ವರು ಅಭಿನಂದನೆ ತಿಳಿಸಿದರು.

# ಇಳಕಲ್ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಚುನಾವಣೆ ಘೋಷಣೆ

**ಇಳಕಲ್ :** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲ್ಲೂಕು ಶಾಖೆ ಇಲಕಲ್ಲದ 2024-2029 ರ ಅವಧಿಗೆ ಕಾರ್ಯಕಾರಿ ಸಮಿತಿ ನಿರ್ದೇಶಕರ ಚುನಾವಣೆ ಘೋಷಣೆಯಾಗಿದ್ದು, ಅಕ್ಟೊಬರ್ 09 ರಿಂದ ಬೆಳಿಗ್ಗೆ 11 ರಿಂದ ಸಂಜೆ 5 ರವರೆಗೆ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ. ಅಕ್ಟೊಬರ್ 18 ರ ಸಂಜೆ 5 ರವರೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.ಅಕ್ಟೊಬರ್ 19 ರ ಬೆಳಿಗ್ಗೆ 11 ರಿಂದ ನಾಮಪತ್ರ ಪರಿಶೀಲನೆ ನಡೆಯಲಿದ್ದು, ಪರಿಶೀಲನೆ ನಂತರ ಅಂದೇ ಅರ್ಹ ಉಮೇದುವಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಅಕ್ಟೊಬರ್ 21 ರ ಸಂಜೆ 04-30 ರವರೆಗೆ ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕವಾಗಿದ್ದು,ಅಂದೇ ಸಂಜೆ 05-30 ರ ನಂತರ ಉಮೇದುವಾರಿಕೆಯನ್ನು ವಾಪಸ್ಸು ಪಡೆದ ನಂತರ ಕಣದಲ್ಲಿ ಉಳಿದ ಅಭ್ಯರ್ಥಿಗಳ ಹೆಸರು ಪ್ರಕಟಣೆ ಮಾಡಲಾಗುವುದು. ಅಕ್ಟೊಬರ್ 28 ರಂದು ಬೆಳಿಗ್ಗೆ 09 ರಿಂದ ಸಂಜೆ 04 ರವರೆಗೆ ಚುನಾವಣೆಯು ನಗರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ10,ಸುಭಾಷ್ ರಸ್ತೆ ಇಳಕಲ್ಲದಲ್ಲಿ ಮತದಾನ ನಡೆಯಲಿದೆ. ಅಂದೇ ಸಂಜೆ ಮತದಾನ ಮುಕ್ತಾಯವಾದ ನಂತರ ಮತಗಳ ಎಣಿಕೆ ಹಾಗೂ ಫಲಿತಾಂಶ ಪ್ರಕಟಿಸಲಾಗುವುದು ಎಂದು ಚುನಾವಣಾಧಿಕಾರಿ ಜಗದೀಶ ಬಿ ಅರಳಿಕಟ್ಟಿ ರವರು ತಿಳಿಸಿದ್ದಾರೆ.

**ಕೆ ಎಚ್ ಎಸ್.**

# ಚಿಮ್ಮಡ; ಚಾಮುಂಡಿದೇವಿ ಮೂರ್ತಿ ಪ್ರತಿಷ್ಠಾಪಣೆ

**ಚಿಮ್ಮಡ :** ಗ್ರಾಮದ ವಿವಿಧ ಸಂಘಟಣೆಗಳು ನಾಡಹಬ್ಬ ದಸರಾ ನಿಮಿತ್ತ ನಾಡದೇವಿ ಚಾಮುಂಡೇಶ್ವರಿಯ ಮೂರ್ತಿ ಪ್ರತಿಷ್ಠಾಪಿಸುವ ಮೂಲಕ ದಸರಾ ನವರಾತ್ರಿ ಉತ್ಸವಕ್ಕೆ ಚಾಲನೆ ನೀಡಿದರು.

ದಸರಾ ಹಬ್ಬದ ನಿಮಿತ್ತ ಆದಿಶಕ್ತಿಯ ಮೂರ್ತಿಗಳನ್ನು ಗುರುವಾರ ಮುಂಜಾನೆ ವಿವಿಧ ವಾದ್ಯ ವೃಂದಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ತಂದು ಗ್ರಾಮದ ಪ್ರಮುಖ



ಬೀದಿ, ಗುಡ್ಡದ ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದ ರಸ್ತೆ, ಸುಭಾಸಚಂದ್ರ ಬೋಸ್ ವೃತ್ತ ಸೇರಿದಂತೆ ಗ್ರಾಮದ ಹಲವೆಡೆ ಸ್ಥಾಪಿಸಲಾಗಿದ್ದು ಒಂಬತ್ತು ದಿನಗಳಕಾಲ ದೇವಿಗೆ ವಿಶೇಷ ಪೂಜೆ ನಡೆಯಲಿದ್ದು ಪ್ರತಿದಿನ ದೇವಿಯ ಉತ್ಸವ ಜರುಗಲಿದೆ ಸ್ಥಳಿಯ ಹಟಗಾರ ಸಮಾಜ ಬಾಂಧವರು ಗ್ರಾಮದ ಅಗಸೀಯ ಹತ್ತಿರ ಪ್ರತಿಷ್ಠಾಪಿಸಲಾದ ತಾಯಿ ಚಾಮುಂಡಿ ಮೂರ್ತಿಗೆ ಪ್ರಥಮದಿನ ನೂರಾರು ಮಹಿಳೆಯರು ಹಳದಿ ವರ್ಣದ ಸೀರೆಉಟ್ಟು ದೇವಿಗೆ ವಿಶೇಷಪೂಜೆ ಆರತಿ ನೆರವೇರಿಸಿದರು.

# ನಮ್ಮ ಜೀವನದಲ್ಲಿಯೂ ಸೃಷ್ಟಿ ಸ್ಥಿತಿ ಲಯಕ್ಕೆ ಕಾರಣವಾಗುವ ಗುರುವೇ ತ್ರಿಮೂರ್ತಿ: ಲೇಖಕ ಮಣ್ಣೆ ಮೋಹನ್

**ನೆಲಮಂಗಲ :** "ಗುರುವು ನಾನಾ ರೂಪದಲ್ಲಿರುತ್ತಾನೆ. ಆದಿಶಕ್ತಿಯಿಂದ ಜನಿಸಿದ ತ್ರಿಮೂರ್ತಿಗಳು ಜಗತ್ತಿನ ಗುರುಗಳಾದರೆ, ಗುರು ತ್ರಿಮೂರ್ತಿಗಳೇ ಹಾಗೆ ಬಿಟ್ಟಿದ್ದಾರೆ. ಆದ್ದರಿಂದಲೇ ಗುರು ಬ್ರಹ್ಮ ಗುರು ವಿಷ್ಣು ಗುರು ಮಹೇಶ್ವರ ಎನ್ನುತ್ತೇವೆ. ಬ್ರಹ್ಮ ವಿಷ್ಣು ಮಹೇಶ್ವರರಿಂದ ಸೃಷ್ಟಿ ಸ್ಥಿತಿ ಲಯದ ಕೆಲಸ ನಡೆಯುತ್ತದೆ. ಹಾಗೆಯೇ ಗುರುವಿನಿಂದ ಸೃಷ್ಟಿ ಸ್ಥಿತಿ ಲಯದ ಕೆಲಸ ನಡೆಯುತ್ತದೆ.

ನಮ್ಮಲ್ಲಿ ಅರಿವನ್ನು ಸೃಷ್ಟಿಸುವುದರ ಮೂಲಕ ಗುರು ಸೃಷ್ಟಿಕರ್ತನಾಗುತ್ತಾನೆ. ಜೀವನವನ್ನು ನಿಭಾಯಿಸುವ, ನಿರ್ವಹಿಸುವ, ನಿಯಂತ್ರಿಸುವ, ನಿರ್ದೇಶಿಸುವ ರೀತಿಯನ್ನು ಕಲಿಸುವ ಮೂಲಕ ಗುರು ಸ್ಥಿತಿಕರ್ತನಾಗುತ್ತಾನೆ. ಹಾಗೂ ನಾವು ಲಯವಾದ ಮೇಲೂ ಅಂದರೆ ಮರಣ ಹೊಂದಿದ ಮೇಲು, ನಮ್ಮ ಹೆಸರು ಇಲ್ಲಿ ಉಳಿಸುವಂತೆ ನೆನಪನ್ನು ಬಿಟ್ಟು ಹೋಗುವಂತೆ ಮಾಡುವ ಮೂಲಕ ಗುರು ಲಯಕರ್ತನಾಗುತ್ತಾನೆ" ಎಂದು ಲೇಖಕ ಚಿಂತಕ ಅಂಕಣಕಾರ ಮಣ್ಣೆ ಮೋಹನ್ ತಿಳಿಸಿದರು.

ಅವರು ತಾಲೂಕಿನ ವೀರರಾಘವನಪಾಳ್ಯದ ಉನ್ನತೀಕರಿಸಿದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ 2006 ರಿಂದ 2015 ನೇ ಸಾಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

"ಜಗತ್ತಿನಲ್ಲಿಅಕ್ಷರಜ್ಞಾನವೇಇಲ್ಲದಾಗಭಾರತವು ನಳಂದ ವಿಶ್ವವಿದ್ಯಾನಿಲಯದಂತಹ ಜ್ಞಾನ





ದೇಗುಲವನ್ನೇ ಕಟ್ಟಿತ್ತು, ಜಗತ್ತಿಗೆ ಎಲ್ಲವನ್ನೂ ಕಲಿಸಿದ್ದು ಭಾರತ. ಆಗಲೇ ಭಾರತ ವಿಶ್ವಗುರುವಾಗಿತ್ತು. ಎಲ್ಲಾ ಯುಗಗಳಲ್ಲು ಗುರುವಿಗೆ ಶ್ರೇಷ್ಠ ಸ್ಥಾನವಿತ್ತು. ಒಮ್ಮೆ ಕಬೀರದ ಮುಂದೆನಮ್ಮಮೊದಲನಮನದೇವರಿಗೋ ಗುರುಗಳಿಗೋ ಎಂಬ ಪ್ರಶ್ನೆ ಬಂದಾಗ, ದೇವರೆಡೆಗೆ ಸಾಗುವ ಮಾರ್ಗವನ್ನು ಕಲಿಸಿದ ಗುರುವಿಗೆ ನನ್ನ ಪ್ರಥಮ ನಮನ ಎಂಬ ನಿಶ್ಚಯಕ್ಕೆ ಬರುತ್ತಾರೆ. ಗುರುವಿನ ಸ್ಥಾನ ಅಷ್ಟೊಂದು ಪವಿತ್ರವಾದದ್ದು" ಎಂದು ಶಾಲೆಯ ಮುಖ್ಯೋಪಾಧ್ಯಾಯರಾದ ಹೊನ್ನಹನುಮಯ್ಯ ತಿಳಿಸಿದರು.

"ಭಾರತದಲ್ಲಿ ಮಹಾಕಾವ್ಯಗಳು ರಚನೆಯಾದಾಗ ಬೇರೆ ದೇಶದ ಜನಸು ಗೆಡ್ಡೆ ಗೆಣಸು. ತಿನ್ನುತ್ತಿದ್ದರು ನಾವು ಹುಟ್ಟುವಾಗ ಮಾಂಸದ ಮುದ್ದೆಯಾಗಿರುತ್ತೇವೆ ಅದಕ್ಕೆ ಒಂದು ಆಕಾರ ಕೊಟ್ಟು ಸಮಾಜದಲ್ಲಿ ಗಣ್ಯ ವ್ಯಕ್ತಿಯನ್ನಾಗಿರೂಪಿಸುವಲ್ಲಿಗುರುವಿನಪಾತ್ರ ಬಹಳ ದೊಡ್ಡದು" ಎಂದು ಕಣೇಗೌಡನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಡಿ ಆರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಲಕ್ಷ್ಮಿದೇವಮ್ಮ ಕೃಷ್ಣಪ್ಪ, ಎಸ್ ಡಿ ಎಂ ಸಿ ಅಧ್ಯಕ್ಷರಾದ ಲಕ್ಷ್ಮಣ, ಗ್ರಾಮ ಪಂಚಾಯಿತಿ ಸದಸ್ಯರಾದ ಶಿವಣ್ಣ, ರಾಜಮ್ಮ ಶ್ರೀಧರ್ ಹೆಚ್ ಎಸ್, ರಾಮು ಹುರುಳಿಹಳ್ಳಿ, ಮಹೇಶ್ ಮುನಿಯಪ್ಪ, ನಿಜಗುಣ, ಪಾಷ , ಮಾಲ ವಿ ಆರ್ ಪಾಳ್ಯ, ಕವಿತ ಹುರುಳಿಹಳ್ಳಿ, ಪುಷ್ಪ ವಿ ಆರ್, ಭವ್ಯ, ಸುಹಾಸಿನಿ, ಧನುಶ್ರೀ, ಭೂಮಿಕ, ಮಹಾಲಕ್ಷ್ಮಿ ಬಿ, ಇಂದಿರಾ, ಸುಕನ್ಯಾ, ಚೈತ್ರ, ಭಾಗ್ಯಲಕ್ಷ್ಮಿ, ಮಂಜುಳ, ಅಮೃತ ಗೌಡ, ಕಾವ್ಯ, ಓಬಳರಾಜ, ವಿನಯ್, ಅಭಿಷೇಕ್ ಭರತ್, ಸಂಜು, ಸುರೇಶ, ವಾಸು, ಯೋಗೇಶ್, ತೇಜವತಿ, ಅಂಬರೀಶ್, ಶಿವರಾಜ್, ಅವಿನಾಶ್, ಪುಷ್ಪ ಆರ್, ಚೈತ್ರ ಡಿ, ಪಂಕಜ, ಉಮಾ, ಮೇಘನಾ, ನಿರ್ಮಲ, ಭವ್ಯ, ಮಹಾಲಕ್ಷ್ಮಿ ವಿ, ಚಂದ್ರಶೇಖರ್, ಕಾವ್ಯ, ಜಗದೀಶ್, ಮಂಜುನಾಥ್, ನಾಗರತ್ನ, ಸುನಿಲ್, ರಮ್ಯ ದರ್ಶನ್ ಗೌಡ, ಚೈತ್ರ ವಿ ಸಿ, ಆನಂದ್, ಅನುಪಮಾ, ಚಂದ್ರಶೇಖರ್, ಲೀಲಾವತಿ, ಯೋಗೇಶ್, ಮಂಜುನಾಥ್, ಅಭಿಷೇಕ್, ತ್ರಿವೇಣಿ ಉಪಸ್ಥಿತರಿದ್ದರು.

ಗುರುವಂದನೆ ಸ್ವೀಕರಿಸಿದ ಶಿಕ್ಷಕರು: ಟಿ ಸಿದ್ದಲಿಂಗಯ್ಯ, ಲಲಿತಮ್ಮ, ಎನ್ ಎಂ ರತ್ನಮ್ಮ, ನಾಗರಾಜು, ರಂಗಲಕ್ಷ್ಮಮ್ಮ ಆರ್, ಎಂ ಎಸ್ ಕೀರ್ತಿಲತಾ, ಎಂ ಬಿ ಅಶ್ವತ್ತಲಕ್ಷ್ಮಿ, ಏನ್ ಜಿ ತ್ರಿವೇಣಿ, ಲಕ್ಷ್ಮಿ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಾದ ಹೊನ್ನಹನುಮಯ್ಯ, ರಾಜೇಶ್ವರಿ ಜಿ ಹೆಚ್, ಲೀಲಾವತಿ ಎನ್ ಜಿ, ಸರೋಜಮ್ಮ ಎಸ್, ಶೀಲಕುಮಾರಿ ಕೆ ಎನ್, ಆನಂದ್ ಟಿ ಎಸ್ ಮತ್ತು ಶ್ರೀನಿವಾಸ್ ಜಿ. ಶಾಲಾ ಮಕ್ಕಳಿಂದ ಪ್ರಾರ್ಥನೆ, ಶ್ರೀಧರ್ ಎಚ್ ಎಸ್ ರವರಿಂದ ಸೊಗಸಾದ ನಿರೂಪಣೆ, ಶಿಕ್ಷಕಿ ಮಾಲಾರಿಂದ ಸ್ವಾಗತ, ಮುಖ್ಯ ಶಿಕ್ಷಕರಾದ ಹೊನ್ನಹನುಮಯ್ಯನವರಿಂದ ಪ್ರಾಸ್ತಾವಿಕ ನುಡಿಗಳು ಮೂಡಿ ಬಂದವು. ಲೇಖಕ ರಾಮು ಹುರುಳಿಹಳ್ಳಿ ರವರ ನೇತೃತ್ವದಲ್ಲಿ, 2006 ರಿಂದ 2015 ನೇ ಸಾಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಗುರುವಂದನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

**ವರದಿ: ಮಣ್ಣೆ ಮೋಹನ್**

# ವಿವೇಕ ಯೋಜನೆಯಡಿ ನೂತನ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ

**ಕೆ.ಆರ್.ಪೇಟೆ :** ಉನ್ನತ ಶಿಕ್ಷಣ ಅಭಿವೃದ್ಧಿಗೊಳಿಸುವ ದೃಷ್ಠಿಯಿಂದ ಕೆ.ಆರ್.ಪೇಟೆ ತಾಲೂಕಿನಲ್ಲಿ ಸರ್ಕಾರಿ ಶಾಲಾ-ಕಾಲೇಜುಗಳಿಗೆ ಹೆಚ್ಚು ಒತ್ತು ನೀಡುತ್ತಿರುವುದು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂದು ಶಾಸಕ ಹೆಚ್.ಟಿ ಮಂಜು ತಿಳಿಸಿದರು.



ತಾಲ್ಲೂಕಿನ ಅಕ್ಕಿಹೆಬ್ಬಾಳು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿವಿವೇಕಯೋಜನೆಯಡಿ 70.15 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ನೂತನ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಅಕ್ಕಿಹೆಬ್ಬಾಳು ವಿಶೇಷ ಇತಿಹಾಸವುಳ್ಳ ಹಾಗೂ ರಾಜ್ಯ ಕಂಡ ಹಲವು ಮಹನೀಯರು ಜನಿಸಿರುವ ಗ್ರಾಮ. ಹೋಬಳಿ ಕೇಂದ್ರವಾದರೂ ಹೆಚ್ಚು ಗ್ರಾಮೀಣ ಪ್ರದೇಶ ಹೊಂದಿರುವ ಹಾಗಾಗಿ ಹೆಚ್ಚಿನ ಕೊಠಡಿಗಳು ನಿರ್ಮಾಣವಾದರೆ ಗ್ರಾಮೀಣ ಭಾಗದ ಮಕ್ಕಳ ಉನ್ನತ ಶಿಕ್ಷಣಕ್ಕೆ ಸಹಕಾರಿಯಾಗುತ್ತವೆ.ಮಕ್ಕಳು ಶಾಲೆಯಲ್ಲಿ ಮೂಲ ಸೌಕರ್ಯಗಳಿಂದ ವಂಚಿತರಾಗದಂತೆ ಸಮರ್ಪಕ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಪ್ರಸ್ತುತ ಸರ್ಕಾರದಲ್ಲಿ ಹಣವಿಲ್ಲದಿದ್ದರೂ ನನ್ನ ಕ್ಷೇತ್ರದ ಸಮಸ್ಯೆ ಇರುವುದನ್ನು ಮನವರಿಕೆ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ತರುತ್ತಿದ್ದೇನೆ.

ಆ ನಿಟ್ಟಿನಲ್ಲಿ ಇಂದು ನೂತನ ಕೊಠಡಿಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದ್ದೇವೆ ಗುತ್ತಿಗೆದಾರ ಗುಣಮಟ್ಟದ ಕಾಮಗಾರಿಯನ್ನು ಕೈಗೊಂಡು ನಿಗದಿತ ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಇತ್ತೀಚಿನ ಬೆಳವಣಿಗೆಯಲ್ಲಿ ಗ್ರಾಮೀಣ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವುದು ತೀವ್ರ ವಿರಳವಾಗಿದೆ. ಖಾಸಗಿ ಶಾಲಾ ಕಾಲೇಜುಗಳ ವ್ಯಾಮೋಹದಿಂದ ಪಾಲಕರು ಮರಳಾಗುತ್ತಿದ್ದಾರೆ. ಹೀಗಾಗಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿಗೆ ತಲುಪಿವೆ.ಆದರೆ ಈ ಶಾಲೆ ಮತ್ತು ಕಾಲೇಜಿನಲ್ಲಿ ಒಟ್ಟು 250ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿರುವ ಮಾಹಿತಿ ತಿಳಿದು ಅರ್ಹ ಕಾಲೇಜಿಗೆ ಅನುದಾನ ನೀಡಿರುವ ತೃಪ್ತಿ ತಂದಿದೆ ಎಂದು ಶಾಸಕ ಹೆಚ್ ಟಿ ಮಂಜು ಹೇಳಿದರು.

ಕಾರ್ಯಕ್ರಮ ಜೆಡಿಎಸ್ ಮುಖಂಡ ಎ.ಆರ್ ರಘು, ಅಕ್ಕಿಹೆಬ್ಬಾಳು ಹೋಬಳಿಯ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ,ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ವಾಸು,ಸದಸ್ಯೆ ಪವಿತ್ರ,ಕಾಲೇಜು ಪ್ರಾಂಶುಪಾಲ ಬಾಲಕೃಷ್ಣ,ಮುಖಂಡರಾದ ಎ.ಸಿ ಮಂಜೇಗೌಡ,ನಾರಾಯಣ್, ರಾಜೇಶ, ಮುದ್ಲಾಪುರ ರಾಮು, ಮಾಚಹೊಳಲು ಪದ್ದು , ವಿಠಲ್ ರಾವ್, ಲೋಕೇಶ್,ಗುತ್ತಿಗೆದಾರ ಆದರ್ಶ,ಉಪನ್ಯಾಸಕ ಚಿಕ್ಕಣ್ಣ, ಆಯಶ ಸಿದ್ದಕ್ಕಿ, ಅರುಣ್ ಕುಮಾರ್, ಶಂಕರ್, ನಾಗೇಶ್,ಪ್ರಿಯಾಂಕಾ ಸೇರಿದಂತೆ ಉಪಸ್ಥಿತರಿದ್ದರು.

# ಆಲಮೇಲ: ಗರ್ಭಿಣಿಯರು ಪೌಷ್ಠಿಕ ಆಹಾರ ಸೇವಿಸಿ

**ಆಲಮೇಲ :** ಗರ್ಭಿಣಿ ಸ್ತ್ರೀಯರು ಪೌಷ್ಟಿಕ ಆಹಾರ ಸೇವಿಸುವ ಮೂಲಕ ಸದೃಢ ಮಕ್ಕಳನ್ನು ಪಡೆಯಬಹುದಾಗಿದೆ ಎಂದು ಅಲಮೇಲ್ ವೈದ್ಯಾಧಿಕಾರಿ ಡಾ. ಜಿ.ಎಸ್. ಪತ್ತಾರ್ ಹೇಳಿದರು

ಅವರು ತಾಲೂಕಿನ ದೇವಣಗಾಂವ ಗ್ರಾಮದ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪೋಷಣ ಅಭಿಯಾನ ಮಾಸಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.



ತಾಯಂದಿರು ಗರ್ಭಿಣಿಯರಿದ್ದಾಗ ಉತ್ತಮ ಪೋಷಕಾಂಶಗಳಿರುವ, ಖನಿಜ ಲವಣಾಂಶ ಮತ್ತು ನಾರಿನಂಶ ಇರುವಂತಹ ಆಹಾರಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಜನಿಸುವ ಮಗು ಸದೃಢವಾಗಿ ಆರೋಗ್ಯವಾಗಿ ಜನಿಸುವ ಮೂಲಕ ದೇಶಕ್ಕೆ ಒಬ್ಬ ಸದೃಢ ಪ್ರಜೆಯನ್ನು ನೀಡಿದಂತಾಗುವುದು ಎಂದರು.

ದೇವಣಗಾಂವ ಪಿ ಎಚ್ ಸಿ ಓ ಶ್ರೀಮತಿ ಎಸ್ ಐ ಕಲಶೆಟ್ಟಿ, ಸಂತೋಷ್ ಕುಂಬಾರ, ಈರಣ್ಣ ಯಡ್ರಾಮಿ, ಶ್ರೀಮತಿ ರೇಣುಕಾ ಕುಲ ಕೋಟಿಗೇರ , ಗ್ರಾಪಂ ಕಾರ್ಯದರ್ಶಿ ಎನ್.ಎ. ಬಂಡಗಾರ, ಮಾರ್ಥಂಡ ವಗ್ಗೆ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯತಿ ಸಿಬ್ಬಂದಿ ಹಾಜರಿದ್ದರು.



# ತೆರೆದ ಕೊಳವೆ ಬಾವಿ ಮುಚ್ಚಲು ಒತ್ತಾಯ

**ಕೊಪ್ಪಳ :** ತಾಲೂಕಿನ ಕಿನ್ನಾಳ ಗ್ರಾಮದ ಬಸ್ ನಿಲ್ದಾಣದ ಕಾಂಪೌಂಡ್ ಗೋಡೆ ಬಳಿ ಹೊಸಮನಿ ಕಾಲೋನಿ ಹತ್ತಿರ ತೆರೆದ ಕೊಳವೆ ಬಾವಿ ಇದ್ದು ಸಂಬಂಧಿಸಿದವರು ಕೂಡಲೇ ಅದು ಮುಚ್ಚುವುದು ಸೂಕ್ತ,ಅಥವಾ ಗ್ರಾಮ ಪಂಚಾಯಿತಿಯವರು ಕೂಡಲೇ ಕಾರ್ಯಪ್ರವರ್ತರಾಗಿ ಕೊಳವೆ ಬಾವಿ ಮುಚ್ಚುವ ಕೆಲಸ ಮಾಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ, ಕಿನ್ನಾಳ ಗ್ರಾಮವು ಬರುವ ದಿನಗಳಲ್ಲಿ ಮಾದರಿ ಗ್ರಾಮವಾಗಿ ಪರಿವರ್ತನೆ ಗೊಳ್ಳಲಿದೆ ಇದು ಎಲ್ಲಡೆ ಸಂತಸ ಉಂಟು ಮಾಡಿದೆ ಇಂತಹ ಗ್ರಾಮದಲ್ಲಿ ಯಾವುದೇ ಅನಾಹುತ ಜರಗುವದು ಬೇಡ, ಮುಂಜಾಗ್ರತ ಕ್ರಮ ವಾಗಿ ಕೂಡಲೇ ತೆರೆದ ಕೊಳವೆ ಬಾವಿ ಮುಚ್ಚುವುದು ಸೂಕ್ತ ಎಂಬ ಅಭಿಪ್ರಾಯ ಜನರದ್ದಾಗಿದೆ, ಸದರಿ ಕೊಳವೆಬಾವಿ ಸ್ಥಿಗಿತ ಗೊಂಡಿರಬಹುದು ಆದರೂ ಮುನ್ನೆಚ್ಚರಿಕೆ ವಹಿಸಿ ಅದು ಮುಚ್ಚುವದು ಸೂಕ್ತ ಎಂಬ ಅಭಿಪ್ರಾಯ ಜನ ವ್ಯಕ್ತಪಡಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State